# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

(ಹಿಂದಿನ ಹೆಸರು : ಕರ್ನಾಟಕ ಭೂಸೇನಾ ನಿಗಮ ನಿಯಮಿತ)

ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು – ೫೬೦ ೦೦೧

# KARNATAKA RURAL INFRASTRUCTURE DEVELOPMENT LTD.,

(A Government of Karnataka Undertaking)

(Formerly Karnataka Land Army Corporation Limited)

CHINNASWAMY STADIUM, RAJBHAVAN ROAD, BANGALORE - 560 001.



BMTC Bus Stand Jayanagar, Bangalore

## 35 ನೇ ವಾರ್ಷಿಕ ವರದಿ 2008-2009

## 35th ANNUAL REPORT 2008-2009

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು.

### ನಿಗಮವು ಅಸ್ತಿತ್ವಗೊಂಡ ವರ್ಷದಿಂದ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ (ರೂ. ಕೋಟಿಗಳಲ್ಲಿ)

**Performance of the Company since inception**

**Turn over (Rs. in Crore)**



## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು.

### ನಿಗಮವು ಅಸ್ತಿತ್ವಗೊಂಡ ವರ್ಷದಿಂದ ಇಲ್ಲಿಯವರೆಗಿನ ಲಾಭ/ನಷ್ಟ (ರೂ. ಕೋಟಿಗಳಲ್ಲಿ)

**Performance of the Company since inception**

**NET PROFIT/LOSS (Rs. In Crore)**



# CERTIFICATE OF CHANGE OF COMPANY NAME

## FROM KLAC TO KRIDL
## WITH EFFECT FROM 06-08-02009

GOVERNMENT OF INDIA - MINISTRY OF CORPORATE AFFAIRS
Registrar of Companies, Karnataka

Fresh Certificate of Incorporation Consequent upon Change of Name

Corporate Identity Number : U75112KA1974SGC002613

In the matter of M/s KARNATAKA LAND ARMY CORPORATION LIMITED

I hereby certify that KARNATAKA LAND ARMY CORPORATION LIMITED which was originally incorporated on Eighth day of August Nineteen Hundred Seventy Four under the Companies Act, 1956 (No. 1 of 1956) as KARNATAKA LAND ARMY CORPORATION LIMITED having duly passed the necessary resolution in terms of Section 21 of the Companies Act, 1956 and the approval of the Central Government signified in writing having been accorded thereto under Section 21 of the Companies Act, 1956, read with Government of India, Department of Company Affairs, New Delhi, Notification No. G.S.R 507 (E) dated 24/06/1985 vide SRN A65474454 dated 06/08/2009 the name of the said company is this day changed to KARNATAKA RURAL INFRASTRUCTURE DEVELOPMENT LIMITED and this Certificate is issued pursuant to Section 23(1) of the said Act.

Given under my hand at Bangalore this Sixth day of August Two Thousand Nine.

(GEETHA MAHALAKSHMI K)

सहायक कम्पनी रजिस्ट्रार / Assistant Registrar of Companies

कर्नाटका

Karnataka

कम्पनी रजिस्ट्रार के कार्यालय अभिलेख में उपलब्ध पत्राचार का पता :

Mailing Address as per record available in Registrar of Companies office:

KARNATAKA RURAL INFRASTRUCTURE DEVELOPMENT LIMITED
CHINNASWAMY STADIUMNORTH END RAJBHAVAN ROAD, BANGALORE,
BANGALORE - 560001,
Karnataka, INDIA

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## (ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)
### ಚಿನ್ನಸ್ವಾಮಿ ಕ್ರೀಡಾಂಗಣ, ರಾಜ ಭವನ ರಸ್ತೆ, ಬೆಂಗಳೂರು 560 001


| ಕ್ರ.ಸಂ. | ವಿಷಯಸೂಚಿ | ಪುಟ ಸಂಖ್ಯೆ |
|---|---|---|
| 1. | ಸದಸ್ಯರಿಗೆ ನೀಡಿದ ನೋಟಿಸ್ | 2 |
| 2. | 2008–2009 ನೇ ಸಾಲಿನ ನಿರ್ದೇಶಕರ ಪಟ್ಟಿ | 4 |
| 3. | 2008–2009ನೇ ಸಾಲಿನ ನಿರ್ದೇಶಕರ ವರದಿ | 6 |
| 4. | ಮಹಾಲೇಖಪಾಲರ ವರದಿ | 14 |
| 5. | ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ | 15 |
| 6. | ಲೆಕ್ಕ ಪರಿಶೋಧಕರ ವರದಿ | 19 |
| 7. | ಆಯವ್ಯಯ ಪತ್ರ (ಬ್ಯಾಲೆನ್ಸ್ ಶೀಟ್) | 26 |
| 8. | ಲಾಭ ಮತ್ತು ನಷ್ಟದ ತಃಖ್ತೆ | 28 |
| 9. | ಆಯವ್ಯಯ ಮತ್ತು ಲಾಭದ ನಷ್ಟದ ತಃಖ್ತೆಯ ಅನುಸೂಚಿಗಳು | 30 |

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## ಸದಸ್ಯರಿಗೆ ಸೂಚನಾ ಪತ್ರ
## 35ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ನಂ.ಕೆಆರ್‌ಐಡಿಎಲ್.ಎಡಿಎಂ/35ನೇ ಎಜಿಎಂ/ 2009-10/ ದಿನಾಂಕ: 11ನೇ ಡಿಸೆಂಬರ್ 2009

35ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 21ನೇ ಡಿಸೆಂಬರ್ 2009ರ ಸೋಮವಾರ ಅಪರಾಹ್ನ 3.30 ಗಂಟೆಗೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು-560 001 ರಲ್ಲಿರುವ ಕಂಪನಿಯ ಕೇಂದ್ರ ಕಛೇರಿಯಲ್ಲಿ ಈ ಕೆಳಗಿನ ಸಾಮಾನ್ಯ ವಿಷಯಗಳ ಚರ್ಚೆಗಾಗಿ ಕರೆಯಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

**ಸಾಮಾನ್ಯ ವ್ಯವಹಾರಗಳು:-**

1) 31ನೇ ಮಾರ್ಚ್ 2009ರ ಆಯವ್ಯಯ ಪತ್ರ, ಲಾಭ ಮತ್ತು ನಷ್ಟದ ಲೆಕ್ಕ, ನಿರ್ದೇಶಕರ ವರದಿ, ಲೆಕ್ಕ ಪರಿಶೋಧಕರ ವರದಿ ಮತ್ತು ಭಾರತ ಸರ್ಕಾರದ ಆಡಿಟರ್ ಜನರಲ್‌ರ ಟೀಕೆ-ಟಿಪ್ಪಣಿಗಳನ್ನು ಕಂಪನಿ ಕಾಯ್ದೆ 1956 ಅಧಿನಿಯಮ 619(4)ರ ಪ್ರಕಾರ ತಿಳಿಯಲು ಮತ್ತು ಅದನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರಲು ನಿರ್ಧರಿಸಲಾಗಿದೆ.
2) 2009-10ನೇ ಸಾಲಿಗೆ ಲೆಕ್ಕ ಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸುವ ಬಗ್ಗೆ.

**ನಿರ್ದೇಶಕ ಮಂಡಳಿ ಆದೇಶದ ಮೇರೆಗೆ**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು.**

**ಬೆಂಗಳೂರು**

ದಿನಾಂಕ : **11-12-2009**

---

**ಸೂಚನೆ:**

ಸಭೆಗೆ ಹಾಜರಾಗಲು ಅರ್ಹರಾದ ಸದಸ್ಯರು ತಮ್ಮ ಅನುಪಸ್ಥಿತಿಯಲ್ಲಿ ಒಬ್ಬ ಪ್ರಾಕ್ಸಿಯನ್ನು ನೇಮಿಸಬಹುದು. ಅವರು ನಿಗಮದ ಸದಸ್ಯರಾಗದಿದ್ದರೂ ಮತದಾನದಲ್ಲಿ ಪಾಲ್ಗೊಂಡು ಮತ ಚಲಾಯಿಸಲು ಮಾತ್ರ ಅರ್ಹರು.

ಯಥಾ ಪ್ರತಿಯನ್ನು

1. **ಶ್ರೀ ಪಿ.ರವಿಕುಮಾರ್,** ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಅಧ್ಯಕ್ಷರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು.

2. ಶ್ರೀ. ಅಶೋಕ್‌ಕುಮಾರ್ ಸಿಂಗ್, ಭಾ.ಅ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಬೆಂಗಳೂರು.

3. ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ (ಆಯವ್ಯಯ ಸಂಪನ್ಮೂಲ), ರಾಜ್ಯಪಾಲರ ಪ್ರತಿನಿಧಿ, ವಿಧಾನಸೌಧ, ಬೆಂಗಳೂರು.

4. ಶ್ರೀ. ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.

---

* Drive out the superstition that has covered your minds. Let us be brave. Know the truth and practice the truth. The goal may be distant, but awake, arise and stop not till the goal is reached.

  * **Swami Vivekananda.**

* For a man of confidence, all roads leads to success. For a man of hard work, all success follow him on his road.

  * **Abraham Lincoln.**

## 2008–09ನೇ ಸಾಲಿನಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್‌ಡೆವೆಲೆಪ್‌ಮೆಂಟ್ ಲಿಮಿಟೆಡ್ ಇಲ್ಲಿಯ ಆಡಳಿತ ಮಂಡಳಿ ನಿರ್ದೇಶಕರುಗಳ ಪಟ್ಟಿ,

### ಅಧ್ಯಕ್ಷರು

| | |
|---|---|
| **ಶ್ರೀ.ಕೆ.ಜೈರಾಜ್, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಅಧ್ಯಕ್ಷರು, ಕರ್ನಾಟಕ ಭೂಸೇನಾ ನಿಗಮ ನಿಯಮಿತ, ಬೆಂಗಳೂರು.<br>(ದಿ:25–10–2007 ರಿಂದ 11–06–2008<br>(ಶ್ರೀ.ಕೆ.ಅಪ್ಪಚ್ಚುರಂಜನ್ ರವರ ಸ್ಥಾನದಲ್ಲಿ) | **ಶ್ರೀಮತಿ. ತಾರಾ ಅಜಯ್ ಸಿಂಗ್, ಭಾ.ಆ.ಸೇ.,<br>ಅಧ್ಯಕ್ಷರು,**<br>ಕೆಆರ್‌ಐಡಿಎಲ್, ಚಿನ್ನಸ್ವಾಮಿ ಸ್ಟೇಡಿಯಂ ರಾಜಭವನ ರಸ್ತೆ, ಬೆಂಗಳೂರು (ದಿ:11–06–2008 ರಿಂದ ದಿ:18–06–2009 (ಶ್ರೀ.ಕೆ.ಜೈರಾಜ್, ಭಾ.ಆ.ಸೇ., ರವರ ಸ್ಥಾನದಲ್ಲಿ) |
| **ವ್ಯವಸ್ಥಾಪಕ ನಿರ್ದೇಶಕರು** | |
| **ಶ್ರೀ.ಸಿ.ಎಂ.ಶಿರೋಳ್, ಭಾ.ಆ.ಸೇ.,**<br>(ದಿ:07–01–2008ರಿಂದ23–07–2008 ರವರೆಗೆ)<br>**(ಶ್ರೀ.ಎಂ.ಎಸ್.ರವಿಶಂಕರ್, ಭಾ.ಆ.ಸೇ., ರವರ ಸ್ಥಾನದಲ್ಲಿ)** | **ಶ್ರೀ. ಅಶೋಕ್ ಕುಮಾರ್ ಸಿಂಗ್ ಭಾ.ಅ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್.,**<br>(ದಿ:23–07–2008ರಿಂದ ಇಲ್ಲಿಯವರೆಗೆ)<br>(ಶ್ರೀ.ಸಿ.ಎಂ.ಶೀರೋಳ್ ಭಾ.ಆ.ಸೇ., ಇವರ ಸ್ಥಾನದಲ್ಲಿ) |
| **ನಿರ್ದೇಶಕರುಗಳು** | |
| **ಶ್ರೀ.ಟಿ.ಸುಕುಮಾರ್,<br>ಸರ್ಕಾರದ ಕಾರ್ಯದರ್ಶಿಗಳು,**<br>ಲೋಕೋಪಯೋಗಿ ಇಲಾಖೆ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು<br>(ದಿ: 22–03–2006 ರಿಂದ 19–01–2009)<br>(ಶ್ರೀ.ಜೆ.ಸಿ.ತಲ್ಲೂರ್ ರವರ ಸ್ಥಾನದಲ್ಲಿ) | **ಶ್ರೀ.ಜಿ.ಟಿ.ಚಂದ್ರಶೇಖರಪ್ಪ,<br>ಸರ್ಕಾರದ ಕಾರ್ಯದರ್ಶಿಗಳು,**<br>ಜಲ ಸಂಪನ್ಮೂಲ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು.<br>(ದಿ:19–12–2006 ರಿಂದ ದಿ:01–04–2008)<br>(ಶ್ರೀ.ಹೆಚ್.ಎಸ್.ಮಹೇಶ್ ರವರ ಸ್ಥಾನದಲ್ಲಿ) |
| **ಶ್ರೀ.ಹೆಚ್.ಎಸ್.ಪ್ರಕಾಶ್ ಕುಮಾರ್,<br>ಮುಖ್ಯ ಅಭಿಯಂತರರು,**<br>ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,<br>ಶೇಷಾದ್ರಿಪುರಂ, ಬೆಂಗಳೂರು.<br>(ದಿ:19–12–2006 ರಿಂದ 17–12–2008 ರವರೆಗೆ)<br>(ಶ್ರೀ.ಮಜರ್ ಜಾವೇದ್ ರವರ ಸ್ಥಾನದಲ್ಲಿ | **ಡಾ॥ಬಾಬುರಾವ್ ಮುಡಬಿ, ಭಾ.ಆ.ಸೇ.,<br>ಆಯುಕ್ತರು,**<br>ಸಮಾಜ ಕಲ್ಯಾಣ ಇಲಾಖೆ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು<br>(ದಿ:22–08–2007 ರಿಂದ ದಿ:18–06–2009)<br>(ಶ್ರೀ.ಯೋಗೇಂದ್ರ ತ್ರಿಪಾಠಿ, ಭಾ.ಆ.ಸೇ., ರವರ ಸ್ಥಾನದಲ್ಲಿ) |
| **ಶ್ರೀ.ಎಂ.ಆರ್.ಕಾಂಬ್ಳೆ, ಭಾ.ಆ.ಸೇ.,<br>ಕಾರ್ಯದರ್ಶಿಗಳು,**<br>ಹಣಕಾಸು ಇಲಾಖೆ (ವೆಚ್ಚ), ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.<br>(ದಿ:19–12–2006 ರಿಂದ ಇಲ್ಲಿಯವರೆಗೆ)<br>(ಪ್ರಸಕ್ತ ಶ್ರೀ.ಎಂ.ಆರ್.ಕಾಂಬ್ಳೆ ಇವರು ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಾಗಿರುತ್ತಾರೆ)<br>(ಶ್ರೀ.ಡಿ.ಎನ್.ನರಸಿಂಹರಾಜು, ಭಾ.ಆ.ಸೇ., ರವರ ಸ್ಥಾನದಲ್ಲಿ) | **ಶ್ರೀ.ಆರ್.ಪಿ.ಕುಲಕರ್ಣಿ<br>ಮುಖ್ಯ ಅಭಿಯಂತರರು,**<br>ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ.<br>ಶೇಷಾದ್ರಿಪುರಂ, ಬೆಂಗಳೂರು.<br>(ದಿ:17–12–2008 ರಿಂದ ಇಲ್ಲಿಯವರೆಗೆ)<br>(ಶ್ರೀ.ಹೆಚ್.ಎಸ್. ಪ್ರಕಾಶ್ ಕುಮಾರ್ ರವರ ಸ್ಥಾನದಲ್ಲಿ) |

## 2008–09ನೇ ಸಾಲಿನಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್‌ಡೆವೆಲೆಪ್‌ಮೆಂಟ್‌ಲಿಮಿಟೆಡ್ ಇಲ್ಲಿಯ ಆಡಳಿತ ಮಂಡಳಿ ನಿರ್ದೇಶಕರುಗಳ ಪಟ್ಟಿ,

| ನಿರ್ದೇಶಕರುಗಳು | |
|---|---|
| **ಶ್ರೀ. ಎ.ಪಿ ಜೋಶಿ, ಭಾ.ಆ.ಸೇ.,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ,<br>ಬಹುಮಹಡಿ ಕಟ್ಟಡ, ಬೆಂಗಳೂರು.<br>(ದಿ: 23–06–2008 ರಿಂದ 17–12–2008)<br>(ಶ್ರೀ. ಕೆ.ಜೈರಾಜ್, ಭಾ.ಆ.ಸೇ., ಇವರ ಸ್ಥಾನದಲ್ಲಿ | **ಶ್ರೀ. ಲಕ್ಷ್ಮಣ್ ರಾವ್ ಪೇಶ್ವೆ,**<br>ಸರ್ಕಾರದ ಕಾರ್ಯದರ್ಶಿಗಳು,<br>ಲೋಕೋಪಯೋಗಿ ಇಲಾಖೆ,<br>(ದಿ:19–12–2009 ರಿಂದ ಇಲ್ಲಿಯವರೆಗೆ)<br>(ಶ್ರೀ.ಟಿ.ಸುಕುಮಾರ್ ಇವರ ಸ್ಥಾನದಲ್ಲಿ) |
| **ಶ್ರೀ. ಅನಿಲ್ ಕುಮಾರ್ ಜಾ, ಭಾ.ಆ.ಸೇ.,**<br>ಸರ್ಕಾರದ ಕಾರ್ಯದರ್ಶಿಗಳು,<br>ಹಣಕಾಸು ಇಲಾಖೆ (ವೆಚ್ಚ).<br>ವಿಧಾನ ಸೌಧ, ಬೆಂಗಳೂರು.<br>(ದಿ: 01–04–2008 ರಿಂದ ಇಲ್ಲಿಯವರೆಗೆ)<br>(ಶ್ರೀ. ಎಂ.ಆರ್. ಕಾಂಬ್ಳೆ, ಭಾ.ಆ.ಸೇ ಇವರ ಸ್ಥಾನದಲ್ಲಿ) | **ಶ್ರೀ ಪಿ.ರವಿಕುಮಾರ್, ಭಾ.ಆ.ಸೇ.,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ,<br>(ದಿ:17–12–2008 ರಿಂದ ಇಲ್ಲಿಯವರೆಗೆ)<br>(ಶ್ರೀ. ಎ.ಪಿ. ಜೋಶಿ, ಭಾ.ಆ.ಸೇ., ಇವರ ಸ್ಥಾನದಲ್ಲಿ) |
| **ಶ್ರೀ ಆರ್.ಎಸ್. ಫೋಂಡೆ,**<br>ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,<br>ಲೋಕೋಪಯೋಗಿ ಇಲಾಖೆ (ಹಣಕಾಸು ವಿಭಾಗ)<br>ವಿಧಾನ ಸೌಧ, ಬೆಂಗಳೂರು.<br>(ದಿ: 17–02–2009 ರಿಂದ ಇಲ್ಲಿಯವರೆಗೆ) | |

* I have learned through bitter experience the one supreme lesson, to conserve my anger, as heat conserved is transmitted into energy, even so our controlled anger can be transmitted into a power that can move the world.

* **Mahatma Gandhi.**

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್

## ನಿರ್ದೇಶಕರ ವರದಿ

ಗೆ

ಸದಸ್ಯರುಗಳಿಗೆ,

2009ರ ಮಾರ್ಚ್ 31ಕ್ಕೆ ಕೊನೆಯಾಗುವ ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯೊಂದಿಗೆ 35ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿರ್ದೇಶಕರುಗಳಿಗೆ ಸಂತಸವಾಗಿದೆ.

### ಕಂಪನಿಯ ಹೆಸರನ್ನು ಬದಲಾಯಿಸಿರುವುದು :

ಈ ವರದಿಯ ವರ್ಷದಲ್ಲಿ ನಿಮ್ಮ ನಿರ್ದೇಶಕರುಗಳು ಪ್ರಸ್ತುತ ಈ ಕಂಪನಿಯು ಅದರ ಹೆಸರಿರುವಂತೆ ಕಾರ್ಯಚಟುವಟಿಕೆಗಳನ್ನು ಹೊಂದಿಲ್ಲದೇ ಇರುವುದರಿಂದ, ದಿನಾಂಕ 25/03/2009 ರಂದು ನಡೆದ ಆಡಳಿತ ಮಂಡಳಿಯ 158ನೇ ಸಭೆಯಲ್ಲಿ ಈ ಕಂಪೆನಿಯ ಹೊಸ ಹೆಸರನ್ನು "ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್" ಎಂದು ಬದಲಾಯಿಸಲು ಪ್ರಸ್ತಾಪಿಸಿರುತ್ತಾರೆ. ಅದನ್ನು ಘನ ಸರ್ಕಾರವು ತಾರೀಖು 22/6/2009ರ ಪತ್ರದಲ್ಲಿ ಅನುಮೋದಿಸಿರುತ್ತದೆ. ಅದಕ್ಕನುಗುಣವಾಗಿ ಕಾರ್ಪೊರೇಟ್ ಅಫೇರ್ಸ್ ಮಂತ್ರಾಲಯ ರವರು ಅಧಿಸೂಚನೆ ಸಂಖ್ಯೆ:GSR/507 (ಇ), ದಿನಾಂಕ 24/6/1985 ಅನ್ನು ಓದಿಕೊಂಡಂತೆ, SRN–A65474454 ತಾರೀಖು 06/08/2009ರಲ್ಲಿ ಅನುಮತಿ ನೀಡಿರುತ್ತಾರೆ. ಮಾನ್ಯ ಕರ್ನಾಟಕ ಸರ್ಕಾರದ ಹಾಗೂ ಷೇರ್ ಪಾಲುದಾರರು ಅನುಮೋದನೆಯನ್ನು ಕೂಡ ಗಣನೆಗೆ ತೆಗೆದುಕೊಂಡು, ಸಂಸ್ಥೆಯ ಹೆಸರನ್ನು "ಕರ್ನಾಟಕ ಭೂಸೇನ ನಿಗಮ ನಿಯಮಿತ" ದಿಂದ "ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್" ಎಂದು ತಾರೀಖು 06/08/2009 ರಿಂದ ಅನ್ವಯಿಸುವಂತೆ ಬದಲಾಯಿಸಲಾಗಿರುತ್ತದೆ. ಕಂಪೆನಿಯ ಕಾಯ್ದೆ 1956ರ ಅಡಿಯಲ್ಲಿರುವಂತೆ ಕ್ರಮಗಳನ್ನು ಅನುಸರಿಸಿ, ಕಂಪೆನಿ ನೊಂದಣಾಧಿಕಾರಿಗಳು, ಕರ್ನಾಟಕ ರವರು " Fresh Cetificate of incorporation" ಅನ್ನು ನೀಡಿರುತ್ತಾರೆ. ಹೆಸರೊಂದನ್ನು ಬಿಟ್ಟು ಈ ಕಂಪನಿಯ ಬೇರೆ ಯಾವುದೇ ಕ್ರಮಗಳಲ್ಲಿ ಬದಲಾಯಿಸಿರುವುದಿಲ್ಲ. ನಿಮ್ಮ ಕಂಪೆನಿಯ ಈ ಹೊಸ ಹೆಸರು ಕಾರ್ಯಚಟುವಟಿಕೆಗಳನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತಿದೆ ಎಂದು ನಿಮ್ಮ ನಿರ್ದೇಶಕರುಗಳು ಅಭಿಪ್ರಾಯ ಪಟ್ಟಿರುತ್ತಾರೆ.

### ಅವಲೋಕನ :

ಪ್ರಸಕ್ತ ವರ್ಷದಲ್ಲಿ ಈ ಹಿಂದೆ ಎಂದೂ ಸಾಧಿಸದೇ ಇರುವಂತಹ ವಹಿವಾಟು ಮೊತ್ತ ರೂ.344.86 ಕೋಟಿ ಸಾಧಿಸಿರುತ್ತದೆ. ಹಿಂದಿನ ಸಾಲಿನಲ್ಲಿ ಸಾಧಿಸಿದ್ದ ವಹಿವಾಟು ರೂ. 205.06 ಕೋಟಿ. ಪ್ರಸಕ್ತ ಸಾಲಿನಲ್ಲಿ ರೂ.150.61 ಕೋಟಿ ಸುವರ್ಣ ಗ್ರಾಮ ಯೋಜನೆ ಕಾಮಗಾರಿಗಳನ್ನು ವಹಿಸಿದ್ದರಿಂದ ಅತ್ಯಧಿಕ ವಹಿವಾಟು ಸಾಧಿಸಲು ಸಾಧ್ಯವಾಗಿರುತ್ತದೆ. ಹಾಗೆಯೇ ಪ್ರಸಕ್ತ ಸಾಲಿನಲ್ಲಿ ಹಿಂದೆಂದೂ ಗಳಿಸದೇ ಇದ್ದ ಲಾಭ ರೂ.21.10 ಕೋಟಿಯನ್ನು ಗಳಿಸಿರುತ್ತದೆ ಹಾಗೂ ರೂ.700.00 ಲಕ್ಷ ತೆರಿಗೆ ಪಾವತಿಗಾಗಿ ಒದಗಣೆ ಮಾಡಲಾಗಿರುತ್ತದೆ. ಈ ಪ್ರಶಂಸನೀಯ ಸಾಧನೆಯನ್ನು ಕಾರ್ಯರೂಪಕ್ಕೆ ತರಲು ವೆಚ್ಚಗಳ ಮೇಲೆ ಕಟ್ಟುನಿಟ್ಟಿನ ಕ್ರಮ, ಕ್ರಮಬದ್ಧವಾದ ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲಾಭದಾಯಕ ಕ್ರಮಗಳನ್ನು ಅಳವಡಿಸಿಕೊಳ್ಳುವಿಕೆಯಿಂದ ಸಾಧ್ಯವಾಗಿರುತ್ತದೆ. ಇಲ್ಲಿಯವರೆಗೂ ಒಟ್ಟಾರೆ ಆಗಿದ್ದ ನಷ್ಟ ರೂ.13.13 ಕೋಟಿ ನಷ್ಟವನ್ನು ತೊಡೆದು ಹಾಕಲು ಹಾಗೂ ರೂ.7.97 ಕೋಟಿಯನ್ನು ಸಾಮಾನ್ಯ ನಿಧಿಗೆ ವರ್ಗಾಯಿಸಲು ತೊಡಗಿಸಲು ಕಂಪೆನಿಯು ಯಶಸ್ವಿಯಾಗಿರುತ್ತದೆ.

ಈ ಕಂಪೆನಿಯು ರಾಜ್ಯದ ಒಟ್ಟು 23 ಕಡೆಗಳಲ್ಲಿರುವ ತನ್ನ ಸ್ವಂತ ನಿವೇಶನಗಳ ಬೆಲೆಗಳನ್ನು ಮರು ಮೌಲ್ಯ ಮಾಡಿ, ಒಟ್ಟು ಬೆಲೆ ರೂ.25.00 ಕೋಟಿಗಳೆಂದು ನಿಗದಿಪಡಿಸಿರುತ್ತದೆ. ಈ ಬೆಲೆಯು ಉಪ ನೊಂದಣಾಧಿಕಾರಿಗಳ ಪ್ರಸಕ್ತ ಮಾರ್ಗಸೂಚಿ ಮೌಲ್ಯದ ಮೇಲೆ ನಿಗದಿ ಪಡಿಸಲಾಗಿದೆ. ಇದರಿಂದಾಗಿ, ಈ ಕಂಪೆನಿಯು ಈ ಹಿಂದೆ ಎಂದು ಇರದೇ ಇದ್ದಂತಹ ಒಟ್ಟು ಆಸ್ತಿ ರೂ.45.25 ಕೋಟಿ ಗಳಿಸಲು ಈ ಸಾಲಿನಲ್ಲಿ ಗಳಿಸಿರುವ ಅತ್ಯಧಿಕ ಲಾಭದಿಂದ ಸಾಧ್ಯವಾಗಿದೆ. ಹಿಂದಿನ ಸಾಲಿನಲ್ಲಿ ರೂ.86.19 ಲಕ್ಷ ಋಣಾತ್ಮಕ ಆಸ್ತಿ ದಾಖಲಾಗಿತ್ತು.

ತಾರೀಖು 31/03/2009ರ ಅಂತ್ಯದಲ್ಲಿ ಪೂರ್ಣಗೊಳಿಸಿ ಹೊಂದಾಣಿಕೆ ಮಾಡದೆ ಇದ್ದ ಕಾಮಗಾರಿಗಳ ಮೊತ್ತ ರೂ.574.00 ಕೋಟಿ ಇದ್ದು ಕಳೆದ ಸಾಲಿನಲ್ಲಿ ರೂ.597.23 ಕೋಟಿ ಇತ್ತು. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ.380.08 ಕೋಟಿ ಅಂತಿಮ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿರುತ್ತದೆ. ಹಿಂದಿನ ಸಾಲಿನಲ್ಲಿ ರೂ.85.34 ಕೋಟಿಗಳಿತ್ತು ಹಾಗೂ ಇದರಿಂದ ರೂ.4.40 ಕೋಟಿ ಆದಾಯವನ್ನು ಗಳಿಸಿರುತ್ತದೆ. ಹಿಂದಿನ ಸಾಲಿನಲ್ಲಿ ಇದು ರೂ.68.69 ಲಕ್ಷಗಳಿತ್ತು.

## ಆರ್ಥಿಕ ಫಲಿತಾಂಶಗಳು

ವರದಿಯ ವರ್ಷದಲ್ಲಿ ಕಂಪನಿಯ ಆರ್ಥಿಕ ಫಲಿತಾಂಶಗಳು ಈ ಮುಂದಿನಂತಿವೆ:

(ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | ***2008–09*** | *2007–08* | *2006–07* |
|---|---|---|---|
| ಮಾಡಲಾದ ಕಾಮಗಾರಿಗಳ ಮೌಲ್ಯ | **34486.21** | 20506.15 | 21850.51 |
| ಇತರೆ ಆದಾಯ | **1268.98** | 642.81 | 608.43 |
| ಒಟ್ಟು ಆದಾಯ | **35755.19** | 21148.96 | 22458.94 |
| ನೇರ ಕಾಮಗಾರಿಗಳ ವೆಚ್ಚ | **29995.05** | 19315.70 | 20050.27 |
| **ಇತರೆ ವೆಚ್ಚಗಳು** | **3429.48** | 2634.05 | 2914.95 |
| ಸವಕಳಿಗೆ ಮುನ್ನ ವರ್ಷದ ಲಾಭ/ನಷ್ಟ | **2330.66** | (800.76) | (506.28) |
| ಸವಕಳಿ | **44.05** | 42.80 | 47.40 |
| ಸವಕಳಿಯ ನಂತರ ವರ್ಷದ ಲಾಭ/ನಷ್ಟ | **2286.61** | 843.58 | 458.88 |
| ಅವಧಿಪೂರ್ವ ಹೊಂದಾಣಿಕೆಗಳು (ಸಿಆರ್) | **536.36** | 103.68 | 76.74 |
| ತೆರಿಗೆ ನಿರ್ಧರಣೆಯ ಮೊದಲಿನ ಲಾಭ/ನಷ್ಟ | **2822.97** | 881.21 | 476.94 |
| ಆದಾಯ ತೆರಿಗೆ (ಹಿಂದಿನ ವರ್ಷ) | **704.65** | 15.07 | 112.58 |
| ತೆರಿಗೆ ನಂತರದ ಆದರೆ ಮುಂದೂಡಲಾದ ತೆರಿಗೆಗೆ ಮೊದಲಿನ ಲಾಭ/ನಷ್ಟ | **2118.32** | (896.28) | (589.52) |
| ಸವಲತ್ತುಗಳ ಮೇಲಿನ ತೆರಿಗೆ (ಡಿಆರ್) | **7.40** | 8.30 | 8.30 |
| ಮುಂದೂಡಲಾದ ಮತ್ತು ಇತರ ತೆರಿಗೆಗಳ ಜಮೆ (ನಿವ್ವಳ) (ಸಿಆರ್) | **0.38** | 18.62 | 0.00 |
| ತೆರಿಗೆ ನಿರ್ಧರಣೆ ನಂತರದ ಲಾಭ/ನಷ್ಟ | **2110.54** | (923.20) | (597.82) |

## ಕಾರ್ಯನಿರ್ವಹಣೆ

ಕಂಪನಿಯ ಆಡಳಿತ ಮಂಡಳಿಯು ಸರ್ಕಾರದ ಹಲವಾರು ಇಲಾಖೆಗಳನ್ನು ನಿರಂತರವಾಗಿ ಸಂಪರ್ಕಿಸಿ ಕಂಪನಿಯ ವಹಿವಾಟನ್ನು ಹೆಚ್ಚಿಸಲು ಅನುಕೂಲವಾಗಲು ಕಾಮಗಾರಿಗಳನ್ನು ವಹಿಸಲು ಕೋರಿಕೊಳ್ಳಲಾಗಿರುತ್ತದೆ. ಹಾಗೆಯೇ ಕಂಪನಿಯೂ ಕೂಡ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಕರೆದಿದ್ದ ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಿರುತ್ತದೆ. ನಿಮ್ಮ ಕಂಪೆನಿಯು 2006–07ನೇ ಹಣಕಾಸಿನ ವರ್ಷದಲ್ಲಿ ಕನ್ಸಲ್‌ಟೆನ್ಸಿ ವಿಭಾಗವನ್ನು ಪ್ರಾರಂಭಿಸಿದ್ದು, ಇದರ ಮೂಲಕ ಟೆಕ್ನಿಕಲ್ ಕನ್ಸಲ್‌ಟೆನ್ಸಿ ಸೇವೆಗಳನ್ನು ಅಗತ್ಯವಿರುವ ಇಲಾಖೆಗಳಿಗೆ ಒದಗಿಸುತ್ತಾ ಬಂದಿದೆ. ಪ್ರಸಕ್ತ ಹಣಕಾಸು ವರ್ಷ 2008–09 ರಲ್ಲಿ ವಿವಿಧ ಇಲಾಖೆಗಳಿಂದ ಒಟ್ಟು ರೂ.154.50 ಕೋಟಿ ಕನ್ಸಲ್‌ಟೆನ್ಸಿ ಸೇವೆಗಳನ್ನು ಒದಗಿಸುವ ಆದೇಶಗಳನ್ನು ಪಡೆದುಕೊಂಡಿರುತ್ತದೆ. ಇದರಿಂದಾಗಿ ಕಂಪನಿಗೆ ಶೇಕಡ 3.75% ರಂತೆ ಕನ್ಸಲ್‌ಟೆನ್ಸಿ ಶುಲ್ಕ ರೂ.69.57 ಲಕ್ಷ ಗಳನ್ನು ಪಡೆದಿರುತ್ತದೆ. ಹಿಂದಿನ ವರ್ಷ ರೂ.43.44 ಲಕ್ಷ ಪಡೆದಿರುತ್ತದೆ. ಸದರಿ ಕನ್ಸಲ್‌ಟೆನ್ಸಿ ವ್ಯವಸ್ಥೆಯನ್ನು ಪ್ರಾರಂಭಿಸಿದಾಗಲಿಂದ ಈ ಕಂಪನಿಯು ಒಟ್ಟು ರೂ.223.68 ಲಕ್ಷ ಕನ್ಸಲ್‌ಟೆನ್ಸಿ ಶುಲ್ಕಗಳಿಸಿರುತ್ತದೆ. ಮುಂಬರುವ ವರ್ಷಗಳಲ್ಲಿ ಇದರಿಂದಾಗಿ ಇನ್ನು ಹೆಚ್ಚಿನ ಆದಾಯ ಗಳಿಸುವ ನಿರೀಕ್ಷೆಯಿದೆ.

## ಹಣಕಾಸು ಸ್ಥಿತಿ

ಕಂಪನಿಯ ಆರ್ಥಿಕ ಸ್ಥಿತಿಯನ್ನು ಈ ಮುಂದಿನ ಅಂಕಿಅಂಶಗಳು ವ್ಯಕ್ತಪಡಿಸುತ್ತದೆ:

(ಲಕ್ಷ ರೂಪಾಯಿಗಳಲ್ಲಿ)

| *ವಿವರಗಳು* | *2008–09* | *2007–08* | *2006–07* |
|---|---|---|---|
| ಸಂದಾಯ ಮಾಡಿದ ಈಕ್ವಿಟಿ ಬಂಡವಾಳ | **1225.00** | 1225.00 | 1225.00 |
| ಮೀಸಲು ಮತ್ತು ನಿಧಿಗಳು | **3299.98** | 2.28 | 2.27 |
| ಪಡೆದ ಸಾಲಗಳು | **0.00** | 446.00 | 422.68 |
| ಅನಿಶ್ಚಿತ ಸಾಲ: ಹುಡ್ಕೊ | **8467.46** | 9713.35 | 11648.28 |
| ಮುಂದೂಡಲಾದ ತೆರಿಗೆ ಹೊಣೆಗಾರಿಕೆ | **32.85** | 32.47 | 13.86 |
| ಪ್ರಸಕ್ತ ಹೊಣೆಗಾರಿಕೆಗಳು ಮತ್ತು ಉಪಬಂಧಗಳು | | | |
| ಮುಂದೂಡಲಾದ ತೆರಿಗೆ ಹೊಣೆಗಾರಿಕೆ | **85888.55** | 94247.88 | 74381.57 |
| ಒಟ್ಟು (ಎ) | **98913.84** | 105666.97 | 87693.66 |
| **ನಿವ್ವಳ ಸ್ಥಿರ ಆಸ್ತಿಗಳು** | **2876.49** | 405.18 | 416.30 |
| ಪ್ರಚಲಿತ ಆಸ್ತಿಗಳು | **23657.76** | 23227.44 | 16331.79 |
| ಸಾಲ ಮತ್ತು ಮುಂಗಡಗಳು | **14979.20** | 20997.58 | 22762.21 |
| ಕಾಮಗಾರಿಗಳ ಮೌಲ್ಯ,(ಹೊಂದಾಣಿಕೆಗೆ ಮುನ್ನ) | **57400.39** | 59723.31 | 47793.10 |
| ಲಾಭ ಮತ್ತು ನಷ್ಟದ ಲೆಕ್ಕ | **0.00** | 1313.46 | 390.26 |
| ಒಟ್ಟು | **98913.84** | 105666.97 | 87693.66 |
| ನಿವ್ವಳ ಆಸ್ತಿ | **4524.98** | (–) 86.19 | 837.01 |

## ಷೇರು ಬಂಡವಾಳ:

ಕಂಪನಿಯ ಅಧಿಕೃತ ಬಂಡವಾಳ 2009ರ ಮಾರ್ಚ್ 31ರ ವೇಳೆಗೆ 1500 ಲಕ್ಷ ರೂ.ಗಳು ಮತ್ತು ಸಂದಾಯ ಮಾಡಿದ ಬಂಡವಾಳ 1225 ಲಕ್ಷ ರೂ.ಗಳು.

## ಸ್ಥಿರ ಠೇವಣಿಗಳು :

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 58ಎ ಅಡಿ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿ ಅಂಗೀಕರಿಸಿಲ್ಲ.

## ಗುಣಮಟ್ಟ :

ಕಂಪನಿಯು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುವತ್ತ ಹೆಚ್ಚಿನ ಗಮನ ನೀಡುವುದನ್ನು ಮುಂದುವರೆಸಿದೆ ಹಾಗೂ ಕೆಲಸಗಳನ್ನು ಸಾಮಾನ್ಯವಾಗಿ ವೇಳಾಪಟ್ಟಿ ಮಿತಿಯೊಳಗೆ ನಿರ್ವಹಿಸಲಾಗುತ್ತದೆ. ಗುಣಮಟ್ಟ ಮತ್ತು ಸೇವಾ ವಿಶ್ವಾಸಾರ್ಹತೆ – ಇವು ಪ್ರಮುಖವಾಗಿ ಗಮನಕೊಡಬೇಕಾದ ಅಂಶವೆಂದು ಗುರುತಿಸಲಾಗಿದೆ. ಕಾಲ ಕಾಲಕ್ಕೆ ಕಾಮಗಾರಿಯ ಗುಣಮಟ್ಟವನ್ನು ಪರಿವೀಕ್ಷಣೆ ಮಾಡಲು ಅನ್ಯ ಸಂಸ್ಥೆಯನ್ನು ನೇಮಿಸಿ, ಗುಣಮಟ್ಟದ ವಿವರಗಳನ್ನು ನಿಗಮಕ್ಕೆ ಕಾಲ ಕಾಲಕ್ಕೆ ಸಲ್ಲಿಸುವ ಏರ್ಪಾಡು ಮಾಡಲಾಗಿದೆ.

## ಮುಂದಿನ ದೃಷ್ಟಿಕೋನ :

ಮುಂಬರುವ ವರ್ಷಗಳಲ್ಲಿ ಪ್ರಮುಖ ಕಾಮಗಾರಿಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ನಿರ್ದೇಶಕರುಗಳು ಗಣನೀಯ ಸಾಧನೆ ಮಾಡಲಿದ್ದಾರೆ. ಮುಂದಿನ ವರ್ಷಗಳಲ್ಲಿ ಒಟ್ಟಾರೆ ಕಂಪನಿಯ ಕಾರ್ಯನಿರ್ವಹಣೆ ಮತ್ತು ಲಾಭ ಸಾಧ್ಯತೆಯನ್ನು ಉತ್ತಮಪಡಿಸಲು ಸವಿವರ ಧ್ಯೇಯೋದ್ದೇಶ ಮತ್ತು ಕಾರ್ಯತಂತ್ರಗಳ ಮೂಲಕ ಭವಿಷ್ಯದ ಸವಾಲುಗಳನ್ನು ಎದುರಿಸುವ ಸ್ಥಿತಿಯಲ್ಲಿ ಕಂಪನಿ ಇರುವುದೆಂದು ನಿರ್ದೇಶಕರುಗಳಿಗೆ ನಂಬಿಕೆಯಿದೆ. ಸರ್ಕಾರವು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಹಾಗೂ ನಿಗಮವು ಗ್ರಾಮೀಣಾಭಿವೃದ್ಧಿ ಇಲಾಖೆ ಅಡಿಯಲ್ಲಿ ಹೆಚ್ಚಿನ ಕೆಲಸಗಳನ್ನು ನಿರ್ವಹಿಸುತ್ತಿದೆ. ಸರ್ಕಾರವು ಸೆಕ್ಷನ್ 4 (ಜಿ) ಕೆ.ಟಿ.ಪಿ.ಪಿ., ಕಾಯ್ದೆ 1999ರ ಅಡಿ ವಿನಾಯಿತಿಯನ್ನು ನೀಡಿರುತ್ತದೆ, ಇದರಿಂದ ನಿಗಮವು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ತೋಟಗಾರಿಕೆ, ಕೃಷಿ, ಯುವಜನ ಸೇವೆ ಮತ್ತು ಕ್ರೀಡೆ ಇಲಾಖೆ, ಬಿ.ಬಿ.ಎಂ.ಪಿ., ಬಿ.ಎಂ.ಆರ್.ಸಿ.ಎಲ್. ಇತ್ಯಾದಿ ಕಾಮಗಾರಿಗಳನ್ನು ಮುಂದಿನ 4–5 ವರ್ಷಗಳವರೆಗೆ ಪಡೆಯಲು ಸರ್ಕಾರದ ಸಹಾಯ ಬೇಕಾಗಿರುತ್ತದೆ.

## ಈ – ಆಡಳಿತ :

ಸರ್ಕಾರದಿಂದ ಹೊರಡಿಸಿರುವ ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ ಮಾಹಿತಿ ಹಕ್ಕು ಕಾಯ್ದೆ 2000 ಅನ್ನು ಈ ಕಂಪನಿಯಲ್ಲಿ ಎಲ್ಲಾ ಹಂತದ ಚಟುವಟಿಕೆಗಳಲ್ಲಿ ಅನುಸರಿಸಲಾಗುತ್ತಿದೆ. ಇದಕ್ಕಾಗಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಲ್ಲಿ ಎಲ್ಲಾ ವಿಭಾಗ ಮಟ್ಟದಲ್ಲಿ ಗಣಕೀಕರಣಗೊಳಿಸಲಾಗಿದ್ದು, 2009–10ನೇ ಸಾಲಿನಿಂದ ಎಲ್ಲಾ ಲೆಕ್ಕಪತ್ರಗಳನ್ನು Tally Accounting System ನಲ್ಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಹಾಗೆಯೇ ಎಲ್ಲಾ ವಿಭಾಗಗಳಲ್ಲಿ ಇಂಟರ್ ನೆಟ್ ಸೌಲಭ್ಯಗಳನ್ನು ಕೂಡ

ಒದಗಿಸಲಾಗಿದೆ ಹಾಗೂ ಎಲ್ಲಾ ಲೆಕ್ಕಪತ್ರ ಸಿಬ್ಬಂದಿಗಳಿಗೆ Tally 9.00 ರಲ್ಲಿ ತರಬೇತಿ ನೀಡಲಾಗಿದೆ. ಹಾಗೂ 3 ಜನ ಸಹಾಯಕ ನಿರ್ದೇಶಕರುಗಳಿಗೆ, ಸ್ಟ್ರಕ್ಚರಲ್ ಇಂಜಿನಿಯರಿಂಗ್ (ಸಿವಿಲ್) ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯಲು 2 ವರ್ಷದವರೆಗೆ ವ್ಯಾಸಂಗದ ರಜೆಯನ್ನು ನೀಡಲಾಗಿದೆ ಹಾಗೂ ಅವರು ಈ ಹೆಚ್ಚಿನ ವಿಧ್ಯಾಸಭ್ಯಾವನ್ನು ಮುಗಿಸಿ ಕಂಪೆನಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕಂಪನಿಯು ಪ್ರಸಕ್ತ ವರ್ಷದಲ್ಲಿ ಲೆಕ್ಕಪತ್ರ ಶಾಖೆಯಲ್ಲಿ ಸೇವೆಸಲ್ಲಿಸುತ್ತಿರುವ 120 ನೌಕರರಿಗೆ ಲೆಕ್ಕಪತ್ರದ ಜ್ಞಾನಾಭಿವೃದ್ಧಿಂಯಾಗಲೂ Tally ನಲ್ಲಿ ತರಬೇತಿ ನೀಡಿ ಹಾಗೂ ಕಂಪೆನಿಂಯಲ್ಲಿ Tally Accounting System ಅನ್ನು ಅಳವಡಿಸಲಾಗಿದೆ.

## ನೌಕರರ ಶ್ರೇಯೋಭಿವೃದ್ಧಿ :

ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹೆಚ್ಚಿನ ಪರಿಜ್ಞಾನ ಹೊಂದಲು ಅನುಕೂಲವಾಗುವುದಕ್ಕೆ ಹಾಗೂ ಕಟ್ಟಡ ನಿರ್ಮಾಣ ತಂತ್ರಜ್ಞಾನದ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯಲ್ಲಿಯೇ ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ಇತರೆ ತರಬೇತಿ ಶಿಬಿರಗಳಿಗೆ ನಿಯೋಜಿಸಲಾಗಿರುತ್ತದೆ.

## ಇಂಧನ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ :

ಕಂಪನಿಯು ಮುಖ್ಯವಾಗಿ ನಿರ್ಮಾಣ ವ್ಯವಹಾರದಲ್ಲಿ ತೊಡಗಿರುವುದರಿಂದ ಕಂಪನಿಗಳ (ನಿರ್ದೇಶಕರ ಮಂಡಲಿಯ ವರದಿಯಲ್ಲಿ ವಿವರಗಳ ಪ್ರಕಟಪಡಿಸುವಿಕೆ) ನಿಯಮಗಳು, 1988 ರನ್ವಯ ಇಂಧನ ಸಂರಕ್ಷಣೆಯ ವಿವರಗಳು ಕಂಪನಿಗೆ ಅನ್ವಯಿಸುವುದಿಲ್ಲ.

## ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚ :

ವರದಿಯ ವರ್ಷದಲ್ಲಿ ವಿದೇಶಿ ವಿನಿಮಯದಿಂದ ಯಾವುದೇ ಗಳಿಕೆ ಮತ್ತು ವೆಚ್ಚವಿರುವುದಿಲ್ಲ.

## ನೌಕರರ ವಿವರಗಳು :

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 217 (2ಎ) ಅಡಿಯಲ್ಲಿ ವಿವರಗಳನ್ನು ಸಲ್ಲಿಸಬೇಕಾಗಿರುವ ನೌಕರರು ಯಾರೂ ಇಲ್ಲ.

## ಲೆಕ್ಕ ಪರಿಶೋಧಕರು :

ಮೆ॥ ಅಶೋಕ್ ಕುಮಾರ್, ಪ್ರಭಾ ಶಂಕರ್ ಅಂಡ್ ಕಂಪೆನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2008–09ನೇ ಹಣಕಾಸಿನ ವರ್ಷಕ್ಕೆ ಶಾಸನ ಬದ್ಧ ಲೆಕ್ಕ ಪರಿಶೋಧಕರೆಂದು ನಿಯಂತ್ರಕರು ಮತ್ತು ಭಾರತದ ಆಡಿಟರ್ ಜನರಲ್‌ರವರು ನೇಮಕ ಮಾಡಿರುತ್ತಾರೆ ಹಾಗೂ 2009–10ನೇ ಸಾಲಿಗೆ ಮೆ॥ ಜ್ಞಾನೋಭ ಅಂಡ್ ಭಟ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರನ್ನು ಶಾಸನ ಬದ್ಧ ಲೆಕ್ಕ ಪರಿಶೋಧಕರೆಂದು ನೇಮಕ ಮಾಡಿರುತ್ತಾರೆ.

## ಭಾರತದ ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರಿಂದ ಲೆಕ್ಕಪತ್ರಗಳ ಪುನರ್ ಪರಿಶೀಲನೆ :

ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರು ನೀಡಿರುವ ನಿರಾಕ್ಷೇಪಣೆಗಳ ಪ್ರಮಾಣ ಪತ್ರವನ್ನು ಈ ವರದಿಯಲ್ಲಿ ಮುದ್ರಿಸಲಾಗಿದೆ.

## ಶಾಸನ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ :

ಶಾಸನ ಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ನೀಡಿರುವ ಉತ್ತರಗಳನ್ನೊಳಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ತಾರೀಖು 6/11/2009 ಅನ್ನು ಈ ವರದಿಗೆ ಲಗತ್ತಿಸಲಾಗಿದೆ.

## ನೌಕರರು :

ನೌಕರರೊಂದಿಗೆ ಉತ್ತಮ ಸಂಬಂಧ ಹೊಂದಿದ್ದು ಕಂಪನಿಯ ನೌಕರರ ನಿಸ್ಪೃಹತೆ, ಕಠಿಣ ಶ್ರಮ ಮತ್ತು ಸಹಕಾರವನ್ನು ನಿರ್ದೇಶಕರು ಶ್ಲಾಘಿಸಿದ್ದಾರೆ.

## ಶಾಸನಗಳ ಪರಿಪಾಲನೆ :

ಕಂಪನಿಯು, ಕಂಪನಿ ಕಾಯ್ದೆ, 1956, ಕಾರ್ಮಿಕ ಕಾನೂನುಗಳು ಮತ್ತು ಇತರ ಕಾರ್ಪೋರೇಟ್ ಕಾನೂನುಗಳ ಅಡಿಯಲ್ಲಿ ನಿಗದಿಪಡಿಸಿರುವ ವಿವಿಧ ಶಾಸನಗಳ ಅಗತ್ಯತೆಗಳನ್ನು ಪಾಲಿಸಿದೆ.

## ನಿರ್ದೇಶಕರು :

ಸರ್ಕಾರವು ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ನಿರ್ದೇಶಕರುಗಳನ್ನು ನೇಮಿಸಿರುತ್ತದೆ.

ಅ) ಶ್ರೀ. ಪಿ.ರವಿಕುಮಾರ್, ಭಾಆಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್.ಡಿ. ಮತ್ತು ಪಿ.ಆರ್. ಇವರನ್ನು ಕಂಪನಿಯ ಅಧ್ಯಕ್ಷರಾಗಿ (ಪ್ರಭಾರ) ಶ್ರೀಮತಿ ತಾರಾ ಅಜಯ್ ಸಿಂಗ್, ಭಾಆಸೇ., ಅವರ ಬದಲಾಗಿ ದಿನಾಂಕ:18/06/2009 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಆ) ಶ್ರೀ. ಅಶೋಕ್ ಕುಮಾರ್ ಸಿಂಗ್, ಭಾಆಸೇ., ಇವರನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ. ಸಿ.ಎಂ. ಶಿರೋಳ್, ಭಾಆಸೇ., ಅವರ ಬದಲಾಗಿ ದಿನಾಂಕ:23/07/2008 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಇ) ಶ್ರೀ. ಅನಿಲ್ ಕುಮಾರ್ ಜಾ, ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ಹಣಕಾಸು ಇಲಾಖೆ (ವೆಚ್ಚ) ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಎಂ.ಆರ್. ಕಾಂಬ್ಳೆ, ಭಾಆಸೇ., ಅವರ ಬದಲಾಗಿ ದಿನಾಂಕ:01/04/2008 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಈ) ಶ್ರೀ. ಆರ್.ಪಿ. ಕುಲಕರ್ಣಿ, ಮುಖ್ಯ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಹೆಚ್.ಎಸ್. ಪ್ರಕಾಶ್ ಕುಮಾರ್, ಅವರ ಬದಲಾಗಿ ದಿನಾಂಕ:17/12/2008 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಉ) ಶ್ರೀ. ಲಕ್ಷ್ಮಣ್ ರಾವ್ ಪೇಶ್ವೆ, ಸರ್ಕಾರದ ಕಾರ್ಯದರ್ಶಿಗಳು, ಜನೋಪಯೋಗಿ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಟಿ. ಸುಕುಮಾರ್, ಅವರ ಬದಲಾಗಿ ದಿನಾಂಕ:19/01/2009 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಊ) ಶ್ರೀ ಆರ್.ಎಸ್. ಫೋಂಡೆ, ಸರ್ಕಾರದ ಉಪ ಕಾರ್ಯದರ್ಶಿ ಮತ್ತು ವಿಶೇಷ ಅಧಿಕಾರಿ, ಹಣಕಾಸು ಇಲಾಖೆ, ಪಿ.ಡಬ್ಲ್ಯು.ಡಿ (ಹಣಕಾಸು ಕೋಶ) ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ:17/2/2009 ಜಾರಿಗೆ ಬರುವಂತೆ ನೇಮಿಸಲಾಯಿತು.

ಋ) ಶ್ರೀ. ಎನ್. ಮಂಜುನಾಥ್ ಪ್ರಸಾದ್, ಭಾಆಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಬಾಬುರಾವ್ ಮುಡುಬಿ, ಭಾಆಸೇ., ಅವರ ಬದಲಾಗಿ ದಿನಾಂಕ:18/06/2009 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿತ್ತು.

ಎ) ಶ್ರೀ. ಎಂ.ಆರ್. ಕಾಂಬ್ಳೆ, ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ವಾಟರ್ ರಿಸೋರ್ಸ್ ಡಿಪಾರ್ಟ್‌ಮೆಂಟ್ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಜಿ.ಟಿ. ಚಂದ್ರಶೇಖರಪ್ಪ, ಅವರ ಬದಲಾಗಿ ದಿನಾಂಕ:01/04/2009 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿತ್ತು.

ಅತ್ಯುತ್ತಮ ಸೇವೆ ಸಲ್ಲಿಸಿರುವುದಕ್ಕಾಗಿ ಶ್ರೀಮತಿ ತಾರಾ ಅಜಯ್ ಸಿಂಗ್, ಭಾಆಸೇ., ರವರು ಅಧ್ಯಕ್ಷರಾಗಿ, ಶ್ರೀ ಎ.ಪಿ. ಜೋಷಿ, ಭಾಆಸೇ., ಶ್ರೀ ಹೆಚ್. ಎನ್.ಪ್ರಕಾಶ್ ಕುಮಾರ್, ಡಾ॥ ಬಾಬೂರಾವ್ ಮುಡಬಿ, ಭಾಆಸೇ., ಮತ್ತು ಶ್ರೀ ಜಿ.ಟಿ. ಚಂದ್ರಶೇಖರಪ್ಪ ರವರುಗಳು ನಿರ್ದೇಶಕರಾಗಿ ಪ್ರಸಕ್ತ ವರ್ಷದಲ್ಲಿ ಸೇವೆ ಸಲ್ಲಿಸಿರುವುದನ್ನು ಶ್ಲಾಘಿಸಲಾಗಿದೆ. ತಮ್ಮ ಅತ್ಯಮೂಲ್ಯ ಸೇವೆಯನ್ನು ಸಲ್ಲಿಸಿರುವ ಶಾಸನಬದ್ಧ ಲೆಕ್ಕಪರಿಶೋಧನದ ಮೆ॥ ಅಶೋಕ್ ಕುಮಾರ್, ಪ್ರಭಾ ಶಂಕರ್ & ಕೋ ರವರನ್ನು ಪ್ರಶಂಸಿಸಲಾಗಿದೆ. ಹಾಗೂ ಸದರಿಯವರು ಆರ್ಥಿಕ ವರ್ಷ 2009-10 ರಲ್ಲಿ ನಿಯಮ ಪ್ರಕಾರ ನಿವೃತ್ತಿ ಹೊಂದಿರುತ್ತಾರೆ.

**ನಿರ್ದೇಶಕರ ಹೊಣೆಗಾರಿಕೆ :**

1956ರ ಕಂಪನಿಗಳ ಅಧಿನಿಯಮದ 217 (2ಎಎ)ನೇ ಅಧಿನಿಯಮದ ಅಡಿಯಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ನಿರ್ದೇಶಕರು ಈ ಮುಂದಿನ ಅಂಶಗಳನ್ನು ತಿಳಿಸಿದ್ದಾರೆ:

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಾಗ ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟಗಳನ್ನು ಅನುಸರಿಸಲಾಗಿದೆ ಹಾಗೂ ಪಾಲಿಸುತ್ತಿದ್ದ ನಿಯಮದಲ್ಲಿ ಬದಲಾವಣೆಗಳಾಗಿದ್ದಲ್ಲಿ ಅಗತ್ಯವಾದ ವಿವರಣೆ ಕೊಡಲಾಗಿದೆ.

ಬಿ) ವಾರ್ಷಿಕ ವರ್ಷದ ಕೊನೆಯಲ್ಲಿ ಕಂಪನಿಯ ಸ್ಥಿತಿಗತಿಗಳು ಮತ್ತು ಆ ಅವಧಿಯ ಕಂಪನಿಯ ನಷ್ಟಗಳ ವಾಸ್ತವ ಚಿತ್ರಣವನ್ನು ನೀಡುವ ಸಲುವಾಗಿ ನಿರ್ದೇಶಕರು ಸಮಂಜಸವಾದ ಮತ್ತು ವಿವೇಚನಾಯುಕ್ತವಾದ ಲೆಕ್ಕಪತ್ರ ಕಾರ್ಯನೀತಿಗಳನ್ನು ಆಯ್ದುಕೊಂಡು ಅವುಗಳನ್ನು ನಿರಂತರವಾಗಿ ಅನ್ವಯಿಸಿ ನಿರ್ಣಯಗಳನ್ನು ಮತ್ತು ಅಂದಾಜುಗಳನ್ನು ಕೈಗೊಂಡಿದ್ದಾರೆ.

ಸಿ) ಕಂಪನಿಯ ಆಸ್ತಿಗಳನ್ನು ರಕ್ಷಿಸುವ ಮತ್ತು ಮೋಸ ಮತ್ತು ಇತರ ಅಕ್ರಮಗಳನ್ನು ನಿವಾರಿಸುವ ಮತ್ತು ಪತ್ತೆಹಚ್ಚುವ ಸಲುವಾಗಿ 1956ರ ಕಂಪನಿಗಳ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ಮತ್ತು ಸಾಕಷ್ಟು ಜಾಗರೂಕತೆಯನ್ನು ವಹಿಸಲಾಗಿದೆ.

ಡಿ) ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ.

ಕೃತಜ್ಞತೆಗಳು :

ನಿರ್ದೇಶಕರುಗಳು ಭಾರತ ಸರ್ಕಾರಕ್ಕೆ, ಕರ್ನಾಟಕ ಸರ್ಕಾರಕ್ಕೆ, ಸರ್ಕಾರದ ಇಲಾಖೆಗಳಿಗೆ, ಮಾನ್ಯ ಶಾಸಕರುಗಳಿಗೆ, ಶಾಸಕಾಂಗ ಸಮಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ಹಣಕಾಸು ಇಲಾಖೆಗೆ, ಜಿಲ್ಲಾ ಪಂಚಾಯತ್‌ಗಳಿಗೆ ತಾವು ನೀಡಿದ ಸಹಕಾರ, ಮಾರ್ಗದರ್ಶನ ಮತ್ತು ಬೆಂಬಲಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ರೀತಿಯ ಸಹಕಾರ ಮತ್ತು ಬೆಂಬಲ ಇಲ್ಲದಿದ್ದಲ್ಲಿ ಪ್ರಸಕ್ತ ವರ್ಷದಲ್ಲಿನ ಪ್ರಗತಿ ಮಾಡಲಾಗುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಗ್ರಾಹಕರು, ಬ್ಯಾಂಕಿನವರು, ಸಲಹೆಗಾರರು, ಶಾಸನಬದ್ಧ ಲೆಕ್ಕ ಪರಿಶೋಧಕರು, ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಅಕೌಂಟೆಂಟ್ ಜನರಲ್ ಲೆಕ್ಕ ಪರಿಶೋಧಕರು ಮತ್ತು ನೌಕರರು ನಿಗಮಕ್ಕೆ ತಮ್ಮ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವುದಕ್ಕೆ ಪ್ರಶಂಸಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಸಹ ಇದೇ ರೀತಿ ಬೆಂಬಲವನ್ನು ನಿರೀಕ್ಷಿಸಲಾಗುವುದೆಂದು ತಿಳಿಸಿದರು.

ಮಂಡಲಿಯ ಪರವಾಗಿ,
ಸಹಿ/-
(ಪಿ. ರವಿಕುಮಾರ್, ಭಾ.ಆ.ಸೇ.,)
ಅಧ್ಯಕ್ಷರು.

ಸ್ಥಳ: ಬೆಂಗಳೂರು
ದಿನಾಂಕ: 14-12-2009

---

* Time is the essence of Development.

* **Dr. A.P.J. Abdul Kalam.**

**ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ 31ನೇ ಮಾರ್ಚ್ 2009ಕ್ಕೆ ಮುಕ್ತಾಯಗೊಂಡ ವರ್ಷದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 1956 619(4)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮಾಡಿರುವ ಟೀಕೆ ಟಿಪ್ಪಣಿಗಳು.**

ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನಿಯಮಿಸಿರುವ ಹಣಕಾಸು ವರದಿಯ ಚೌಕಟ್ಟಿಗೆ ಅನುಗುಣವಾಗಿ 2009ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ ಹಣಕಾಸಿನ ವಿವರಪಟ್ಟಿಗಳನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ, 1956ರ 619 (2)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರು, ಅವರ ವೃತ್ತಿಸಂಸ್ಥೆಯಾದ ಭಾರತದ ಚಾರ್ಟರ್ಡ್ ಅಕೌಂಟೆಂಟರು ಗೊತ್ತುಪಡಿಸಿರುವ ಲೆಕ್ಕಪರಿಶೋಧನೆ ಮತ್ತು ಖಾತ್ರಿ ಮಾನಕಗಳಿಗೆ ಅನುಸಾರವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧರಿಸಿ ಕಂಪನಿಗಳ ಅಧಿನಿಯಮ, 1956ರ 227ನೇ ಪ್ರಕರಣದ ಮೇರೆಗೆ ಈ ಹಣಕಾಸಿನ ವಿವರಪಟ್ಟಿಗಳನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಲು ಜವಾಬ್ದಾರರಾಗಿದ್ದಾರೆ. ಇದನ್ನು ಅವರು ನಿರ್ವಹಿಸಿದ್ದಾರೆಂದು ಅವರ ಲೆಕ್ಕಪರಿಶೋಧನಾ ವರದಿ ದಿನಾಂಕ: 06ನೇ ನವೆಂಬರ್ 2009ರಲ್ಲಿ ಹೇಳಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ 2009ರ ಮಾರ್ಚ್ 31ರಂದು ಕೊನೆಗೊಳ್ಳುವ ವರ್ಷದ ಹಣಕಾಸು ವಿವರಪಟ್ಟಿಗಳ ಪೂರಕ ಲೆಕ್ಕಪರಿಶೋಧನೆಯನ್ನು ಕಂಪನಿಗಳ ಅಧಿನಿಯಮ, 1956ರ 619 (3) (ಬಿ) ಪ್ರಕರಣದ ಮೇರೆಗೆ ನಡೆಸಲಾಗಿದೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಕಾರಿ ಕಾಗದಪತ್ರಗಳನ್ನು ನೋಡದೆ ಸ್ವತಂತ್ರವಾಗಿ ನಿರ್ವಹಿಸಲಾಗಿದೆ ಮತ್ತು ಅದು ಮೂಲತಃ ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿ ಸಿಬ್ಬಂದಿಯ ವಿಚಾರಣೆಗಳನ್ನು ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ಕೆ ಪರೀಕ್ಷೆ ಮಾಡುವುದಕ್ಕೆ ಸೀಮಿತವಾಗಿದೆ. ನಾನು ಲೆಕ್ಕಪರಿಶೋಧನೆ ಮಾಡಿರುವ ಪ್ರಕಾರ ಕಂಪನಿಗಳ ಅಧಿನಿಯಮ, 1956ರ 619 (4) ನೇ ಪ್ರಕರಣದ ಮೇರೆಗೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಬಗ್ಗೆ ಅಥವಾ ಪೂರಕವಾಗಿ ಯಾವುದೇ ಟೀಕೆ ಟಿಪ್ಪಣಿಗೆ ಅವಕಾಶವಾಗುವಂಥ ಯಾವುದೇ ಗಮನಾರ್ಹ ಸಂಗತಿಯು ಗಮನಕ್ಕೆ ಬಂದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ
ಸಹಿ
(ಸುಭಾಷಿಣಿ ಶ್ರೀನಿವಾಸನ್)
ಪ್ರಧಾನ ಮಹಾಲೇಖಪಾಲರು,
(ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು.

**ಬೆಂಗಳೂರು:**
**ದಿನಾಂಕ: 14ನೇ ಡಿಸೆಂಬರ್ 2009**

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು– 560 001
## 31.3.2009ಕ್ಕೆ ಕೊನೆಯಾಗುವ ವರ್ಷದ ಕೆಆರ್‌ಐಡಿಎಲ್ ಸಂಸ್ಥೆಯ ಲೆಕ್ಕಪತ್ರಗಳ ಬಗ್ಗೆ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ

| ಕ್ರಸಂ. | ಆಕ್ಷೇಪಣೆಗಳು | ಆಡಳಿತ ಮಂಡಲಿಯ ಉತ್ತರಗಳು |
|---|---|---|
| 1. | **ಆದಾಯ ಗುರುತಿಸುವುದು:** ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದ ಆದಾಯವನ್ನು AS–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ದರ ಪಟ್ಟಿಯ ದರದಂತೆ ನಿರ್ವಹಿಸಿದ ಮೌಲ್ಯದ ಕಾಮಗಾರಿಗಳನ್ನು ಹೊರತುಪಡಿಸಿ, ಕಂಪನಿಯು ಸೇವಾ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಪ್ರಸಕ್ತ ವರ್ಷದ ಆದಾಯವನ್ನು ಗುರುತಿಸುವಲ್ಲಿ ವ್ಯತ್ಯಾಸವಿರುವುದರಿಂದ ಅದನ್ನು ನಿರ್ಧರಿಸಲಾಗುವುದಿಲ್ಲ. | ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದಲ್ಲಿ ಅಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಆದಾಯವನ್ನು ಗುರುತಿಸುವ ಸಲುವಾಗಿ AS–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ವಾಸ್ತವಿಕ ವೆಚ್ಚ ಹಾಗೂ ದರಪಟ್ಟಿಯ ನಡುವಿನ ವ್ಯತ್ಯಾಸವನ್ನು ಸಮರ್ಥಿಸಿಕೊಳ್ಳಲಾಗದ ಕಾರಣ ನಿಗಮವು ಹೆಚ್ಚಿಗೆಯಾದ ಆದಾಯವನ್ನು ಗುರುತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| 2. | ಕಂಪನಿಯಲ್ಲಿ ಲಭ್ಯವಿರುವ ನಿರುಪಯುಕ್ತ ಸ್ವತ್ತುಗಳನ್ನು ಗುರುತಿಸಿರುವುದಿಲ್ಲ ಹಾಗೂ ಲೆಕ್ಕದಿಂದ ತೆಗೆದುಹಾಕಿರುವುದಿಲ್ಲ. ಆದ್ದರಿಂದ ಸ್ಥಿರಾಸ್ತಿಗಳನ್ನು ಅಧಿಕವಾಗಿ ಗುರುತಿಸಲಾಗಿದೆ. | ಮುಂಬರುವ ವರ್ಷಗಳಲ್ಲಿ ನಿರುಪಯುಕ್ತ ಸ್ವತ್ತುಗಳನ್ನು ಗುರುತಿಸಿ ಲೆಕ್ಕದಿಂದ ತೆಗೆದುಹಾಕಲಾಗುವುದು ಪ್ರಸಕ್ತ ವರ್ಷದ ನಿವ್ವಳ ಲಾಭಕ್ಕೆ ಹೋಲಿಸಿದಾಗ ಲೆಕ್ಕದಿಂದ ತೆಗೆದು ಹಾಕಬೇಕಾದ ಮೊತ್ತವು ಅತಿ ಕಡಿಮೆ ಇದ್ದು, ಹಾಗೂ ಆ ಮೊತ್ತವು ಸಾಮಾಗ್ರಿಗಳಾಗಿರುವುದಿಲ್ಲ. |
| 3. | ಹೊಂದಾಣಿಕೆ ಬಾಕಿಯಿರುವ ಕಾಮಗಾರಿಯ ಮೌಲ್ಯಕ್ಕೆ ಸಂಬಂಧಿಸಿದಂತೆ ಪ್ರತಿ ಕಾಮಗಾರಿಯ ವಿವರಗಳು ಮತ್ತು ಪ್ರಗತಿಯಲ್ಲಿರುವ ಅಂಥ ಕಾಮಗಾರಿಯ ಮೌಲ್ಯದ ವಿವರಗಳನ್ನು ಪೂರಕವಾಗಿ ನೀಡಿಲ್ಲ. ಅಂಥ ಪರಿಶೀಲನಾರ್ಹ ದಾಖಲೆಗಳು ಇಲ್ಲದಿರುವುದರಿಂದ ಅಂಥ ಮೌಲ್ಯದ ಸೂಕ್ತತೆಯನ್ನು ನಿರ್ಧರಿಸಲಾಗುವುದು | ಹೊಂದಾಣಿಕೆಯ ನಂತರ ಅನುಸೂಚಿಗಳು ಲಭ್ಯವಾದಲ್ಲಿ, ಆಡಳಿತ ಮಂಡಲಿಯು ಮುಂಬರುವ ವರ್ಷಗಳಲ್ಲಿ ಇಲಾಖೆವಾರು (ಪಾರ್ಟಿ) ಮತ್ತು ಕಾಮಗಾರಿವಾರು ವಿವರಗಳನ್ನು ಮರುಹೊಂದಾಣಿಕೆ ಮಾಡಲು ಪ್ರಯತ್ನ ಮಾಡುತ್ತಿದೆ. |
| 4. | 2003–04 ರಿಂದ 2008–09ರ ವರೆಗಿನ ಚಿಲ್ಲರೆ ಸಾಲಗಾರರ ಅಡಿಯಲ್ಲಿ ತೋರಿಸಲಾದ ಬಾಕಿಯನ್ನು ಪಕ್ಷಿಕಾರರು ಸ್ಥಿರೀಕರಿಸಿಲ್ಲ. ಅಲ್ಲದೆ, 2003–04 ರಿಂದ 2005–06ರ ಲೆಕ್ಕ ವರ್ಷಗಳಿಗೆ ಸಂಬಂಧಪಟ್ಟಂತೆ ಒಟ್ಟಾರೆ 2753.90 ಲಕ್ಷ ರೂ.ಗಳಷ್ಟು ಮೊತ್ತಕ್ಕೆ ಸಂಬಂಧಿಸಿದ ಚಿಲ್ಲರೆ ಸಾಲಗಾರರನ್ನು | 2001–02 ಮತ್ತು 2002–03 ನೇ ಸಾಲಿನಲ್ಲಿ ರೂ.573.63 ಲಕ್ಷಗಳನ್ನು ಲೆಕ್ಕದಿಂದ ತೆಗೆದುಹಾಕಲಾಗಿದೆ. 2008–09ನೇ ಸಾಲಿನಲ್ಲಿ ರೂ.72.67 ಲಕ್ಷಗಳು ಕಂಪನಿಗೆ ಬಂದಿದ್ದು, ಅದನ್ನು ಚಿಲ್ಲರೆ ಸಾಲಗಾರರೊಂದಿಗೆ ಹೊಂದಾಣಿಕೆ ಮಾಡಲಾಗುವುದು. |

| | | |
|---|---|---|
| | ಕಾಲಪರಿಮಿತಿಯಿಂದ ಪ್ರತಿಷೇಧಿಸಲಾಗಿದೆ ಹಾಗೂ ಕಂಪನಿಯು ಸಂದೇಹಾಸ್ಪದ ಸಾಲಗಳು ಯಾವುದಾದರೂ ಇದ್ದರೆ, ಅವುಗಳಿಗೆ ಯಾವುದೇ ಉಪಬಂಧ ಕಲ್ಪಿಸಿಲ್ಲ. ಆದ್ದರಿಂದ ಪ್ರಸಕ್ತ ವರ್ಷದ ಲಾಭವನ್ನು ಹೆಚ್ಚುವರಿಯಾಗಿ ಪರಿಗಣಿಸಲಾಗಿದೆ. | ನಿಗಮವು ಸರ್ಕಾರಿ ಏಜೆನ್ಸಿಯಾಗಿದ್ದು ಸರ್ಕಾರ ಮತ್ತು ಸರ್ಕಾರಿ ಇಲಾಖೆಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಮುಖ್ಯವಾಗಿ ನಿರ್ವಹಿಸುತ್ತಿದೆ. ಹಳೆ ಬಾಕಿಗಳನ್ನು ವಸೂಲಿ ಮಾಡಲು ನಿಗಮವು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದೆ. 3 ವರ್ಷಕ್ಕೆ ಮೀರಿದ ಬಾಕಿ ಸಾಲಗಾರರ ಸಾಲವನ್ನು ಮುಂದಿನ ಕೆಲವು ವರ್ಷಗಳಲ್ಲಿ ಪ್ರಕರಣದ ಆಧಾರದ ಮೇಲೆ ಹಂತಹಂತವಾಗಿ ಒದಗಣೆ ಮಾಡಲಾಗುತ್ತದೆ. ಆದ್ದರಿಂದ 3 ವರ್ಷಗಳಿಗೆ ಮೀರಿದ ಸಾಲಗಾರರ ಸಾಲ ವದಗಣೆ ಮಾಡುವುದು ಸೂಕ್ತವೆನಿಸುವುದಿಲ್ಲ. |
| 5. | ಸರ್ಕಾರ ಮತ್ತು ಸರ್ಕಾರೀ ಸಂಸ್ಥೆಗಳಲ್ಲಿರುವ ಠೇವಣಿಗಳು ಸೇರಿದಂತೆ ಸಾಲಗಳು ಮತ್ತು ಮುಂಗಡಗಳನ್ನು ಸ್ಥಿರೀಕರಿಸಿ ಸಮರ್ಥಿಸಿಕೊಂಡಿಲ್ಲ. ಇತರರಿಗೆ ನೀಡಿರುವ ರೂ.1453.67 ಲಕ್ಷ ರೂಪಾಯಿಗೆ ಸಮನಾದ ಸಾಲಗಳ ಮತ್ತು ಮುಂಗಡಗಳ ಸಂಬಂಧದಲ್ಲಿ ತಹಲ್‌ವರೆಗೆ ಮರುಹೊಂದಾಣಿಕೆ ಮಾಡಿಲ್ಲ ಮತ್ತು ಅನುಸೂಚಿಗಳನ್ನು ಇಟ್ಟಿಲ್ಲ. ಇದರಲ್ಲಿ ಅನೇಕ ಹಳೆ ಬಾಕಿಗಳು ಸೇರಿವೆ. ಈ ಬಗ್ಗೆ ಪುನರ್ ಪರಿಶೀಲಿಸಿ ಅನುಸರಣಾ ಕ್ರಮ ಕೈಗೊಳ್ಳುವ ಅಗತ್ಯವಿದೆ. ವಸೂಲಿ ಮಾಡಬೇಕಾದ ಸಾಲಗಳು ಮತ್ತು ಅದರ ಮುಂಗಡಗಳನ್ನು ಖಚಿತವಾಗಿ ತಿಳಿಸದಿರುವುದರಿಂದ, ಕಂಪನಿಯ ಲಾಭ/ ನಷ್ಟದ ಮೇಲೆ ಆಗುವ ಅದರ ಸಾಕ್ಷೇಪ ಪರಿಣಾಮವನ್ನು ಖಚಿತವಾಗಿ ಹೇಳಲಾಗುವುದಿಲ್ಲ. | ಆಯಾ ವಿಭಾಗಗಳ ಉಪ ನಿರ್ದೇಶಕರ ನೇತೃತ್ವದಲ್ಲಿ ಪ್ರತ್ಯೇಕ ಅನುಸೂಚಿಗಳನ್ನು ಸಿದ್ಧಪಡಿಸಲು ಪ್ರತ್ಯೇಕ ತಂಡವೊಂದನ್ನು ರಚಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಅದನ್ನು ಪೂರೈಸಿದ ಮೇಲೆ, ವ್ಯತ್ಯಾಸಗಳೇನಾದರೂ ಇದ್ದಲ್ಲಿ, ಅದನ್ನು ತದನುಸಾರವಾಗಿ ಲೆಕ್ಕಹಾಕಲಾಗುವುದು. |
| 6. | 731.23 ಲಕ್ಷ ರೂಪಾಯಿಗೆ ಸಮನಾದ ಸಣ್ಣಪುಟ್ಟ ಸಾಲಗಾರರಿಂದ ಸಂಗ್ರಹಿಸಿದ ಮೊತ್ತ ಮತ್ತು ಇತರ ಗ್ರಾಹಕರಿಂದ ಸಂಗ್ರಹಿಸಿದ ಮುಂಗಡ ಹಣ ಠೇವಣಿಯು ಸ್ಥಿರೀಕರಣಕ್ಕೆ ಮತ್ತು ಮರುಹೊಂದಾಣಿಕೆಗೆ ಒಳಪಟ್ಟಿದೆ. ಮೇಲೆ ಹೇಳಿರುವುದಕ್ಕೆ ಸಂಬಂಧಿಸಿದಂತೆ ಅನುಸೂಚಿಗಳನ್ನು ತಹಲ್‌ವರೆಗೆ ಇಟ್ಟಿಲ್ಲ. | ಸಣ್ಣಪುಟ್ಟ ಸಾಲಗಾರರ ಮೊತ್ತ, ಎಸ್.ಡಿ ಫರ್ಮ್‌ಗಳು, ಮುಂಗಡ ಹಣ ಠೇವಣಿ ಮುಂತಾದವುಗಳನ್ನು ಮರುಹೊಂದಾಣಿಕೆ ಮಾಡಲು ಎಲ್ಲಾ ಪ್ರಯತ್ನಗಳನ್ನು ಆಡಳಿತವರ್ಗವು ಮಾಡುತ್ತಿದೆ ಮತ್ತು ಮರುಹೊಂದಾಣಿಕೆಯ ಕಾರ್ಯವನ್ನು ಪೂರೈಸಿದ ತರುವಾಯ ಸರಿಯಾದ ಬಾಕಿ ಮೊತ್ತಗಳನ್ನು ಲೆಕ್ಕಪುಸ್ತಕಗಳಲ್ಲಿ ತೋರಿಸಲಾಗುವುದು. |
| 7. | ಸಣ್ಣಪುಟ್ಟ ಸಾಲಗಾರರು, ಇತರ ಹೊಣೆಗಾರಿಕೆಗಳು, ಮುಂ.ಹ.ಠೇ, ಮುಂಗಡಗಳ ಸಂಬಂಧದಲ್ಲಿ, ನಗದುರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ವಸೂಲಿಯಾಗಬೇಕಾದ ಗ್ರಾಹಕವಾರು | ಮರುಹೊಂದಾಣಿಕೆಗೆ ಒಳಪಟ್ಟು, ಸಣ್ಣಪುಟ್ಟ ಸಾಲಗಾರರು, ಇತರ ಹೊಣೆಗಾರಿಕೆಗಳು ಮುಂ.ಹ.ಠೇ., ಮುಂಗಡಗಳು, ಇತ್ಯಾದಿಗಳಿಗೆ ಸಂಬಂಧಪಟ್ಟ ಅನುಸೂಚಿಗಳು ಲಭ್ಯವಿದೆ. ಮೇಲ್ಕಂಡ ಪ್ಯಾರಾ 6ರಲ್ಲಿ |

| | | |
|---|---|---|
| | ಬಾಕಿ ಮೊತ್ತ ಮತ್ತು ತೇವಣಿಗಳು ಲಭ್ಯವಿರುವುದಿಲ್ಲ. ಕೆಲವು ಪ್ರಾಜೆಕ್ಟ್‌ಗಳಲ್ಲಿ ಇಟ್ಟುಕೊಂಡು ಬಂದಿರುವ ಗ್ರಾಹಕವಾರು ಖಾತಾ ಲೆಕ್ಕಪುಸ್ತಕಗಳಲ್ಲಿ 1.4.1996ರಂದು ಇದ್ದಂತೆ ಬಾಕಿ ಮೊತ್ತಗಳನ್ನು ಸೇರಿಸಿಲ್ಲದಿರುವುದರಿಂದ, ಮುಖ್ಯ ಕಚೇರಿ ದಾಖಲೆಗಳಿಗನುಸಾರವಾಗಿ ಗ್ರಾಹಕವಾರು ಲೆಕ್ಕಪತ್ರಗಳನ್ನು ಮತ್ತು ಪ್ರಾಜೆಕ್ಟ್ ಪುಸ್ತಕವನ್ನು ಮರುಹೊಂದಾಣಿಕೆ ಮಾಡಬೇಕಾಗಿದೆ. ಈ ಲೆಕ್ಕಗಳಲ್ಲಿ ಅನೇಕ ಬಾಬ್ತುಗಳಲ್ಲಿ ದೀರ್ಘಾವಧಿಯಿಂದ ಬರಬೇಕಾದ ಬಾಕಿ ಮೊತ್ತಗಳು ಸೇರಿವೆ. ಅದನ್ನು ಗ್ರಾಹಕವಾರು ವಿವರಗಳು / ವಿಂಗಡಣೆಗಳೊಂದಿಗೆ ಪುನರ್ ಪರಿಶೀಲಿಸುವವರೆಗೆ ಈ ಲೆಕ್ಕಗಳ ವಸೂಲಾತಿ ಬಗ್ಗೆ ಅಥವಾ ಅನ್ಯಥಾ ಖಚಿತವಾಗಿ ಗೊತ್ತಾಗುವುದಿಲ್ಲ. ಸಂದೇಹಾತ್ಮಕ ಸಾಲಗಳಿಗೆ ಏರ್ಪಾಡುಗಳನ್ನು, ಅಗತ್ಯವಿರುವ ಹೊಂದಾಣಿಕೆಗಳು ಯಾವುದಾದರೂ ಇದ್ದರೆ ಅವುಗಳನ್ನು ಮಾಡಿಲ್ಲ. ಅಲ್ಲದೆ ಶೀರ್ಷಿಕೆಗಳ ಅಡಿಯಲ್ಲಿನ ಬಾಕಿಗಳು, ಕೆಲವು ಗ್ರಾಹಕರ ಖರ್ಚುಶಿಲ್ಕುಗಳನ್ನು ಇತರ ಗ್ರಾಹಕರ ಜಮಾ ಶಿಲ್ಕುಗಳಲ್ಲಿ, ಹಾಗೆಯೇ ಕೆಲವು ಗ್ರಾಹಕರ ಜಮಾ ಶಿಲ್ಕುಗಳಲ್ಲಿ ಇತರ ಗ್ರಾಹಕರ ಖರ್ಚು ಶಿಲ್ಕುಗಳನ್ನು ತೋರಿಸಿರುವುದರಿಂದ, ಮತ್ತು ಜಮಾಖರ್ಚು ಪಟ್ಟಿಯಲ್ಲಿ, ಸಂದಾಯವಾಗಬೇಕಾದ / ವಸೂಲಿಯಾಗಬೇಕಾದ ಪ್ರಕಟಿಸುವ ಬಾಕಿಗಳಿಗೆ ಬದಲಾಗಿ ನಿವ್ವಳ ಬಾಕಿಗಳನ್ನು ತೋರಿಸಿರುವುದರಿಂದ ಸರಿಯಾದ ವಿವರವನ್ನು ನೀಡುವುದಿಲ್ಲ. | ವಿವರಿಸಿರುವಂತೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. |
| 8. | ನಿಗಮವು ಈ ಕೆಳಕಂಡ ದಾಯಿತ್ವವನ್ನು ಒದಗಿಸಿರುವುದಿಲ್ಲ.<br>ಅ) ನಮೂನೆ 240 ರ ವಾರ್ಷಿಕ ವಹಿವಾಟಿನ ಮತ್ತು ಪ್ರಗತಿಯಲ್ಲಿನ ಕಾಮಗಾರಿಗಳ ಮೊತ್ತದ ನಡುವೆ ಇರುವ ವ್ಯತ್ಯಾಸದಿಂದಾಗಿ ಮೌಲ್ಯಾಧಾರಿತ ತೆರಿಗೆಯ ದಾಯಿತ್ವದ ವ್ಯತ್ಯಾಸವನ್ನು ಕಂಡುಹಿಡಿಯಲಾಗಿಲ್ಲ ಮತ್ತು ಕಲ್ಪಿಸಿರುವುದಿಲ್ಲ. (ಉಲ್ಲೇಖ:ಕಂಡಿಕೆ 19 (ಬಿ) ರ ಅನುಸೂಚಿ 20).<br>ಆ) ಬಿಸಿಎಂ ವಿದ್ಯಾರ್ಥಿ ನಿಲಯದ ಕಾಮಗಾರಿಗಳಿಂದ ರೂ.182.71 ಲಕ್ಷಗಳಷ್ಟು ನಷ್ಟವಾಗಿರುತ್ತದೆ. (ಲಿಕ್ವಿಡೇಟೆಡ್ ಡ್ಯಾಮೇಜಸ್) (ಉಲ್ಲೇಖ: ಅನುಸೂಚಿ 20ರ ಕಂಡಿಕೆ-22). | ನಿಗಮವು ಈ ಕೆಳಕಂಡ ದಾಯಿತ್ವಗಳನ್ನು ಒದಗಿಸಿರುವುದಿಲ್ಲ.<br>ಅ) ವಾಣಿಜ್ಯ ತೆರಿಗೆ ಇಲಾಖೆಯು (ಕರ್ನಾಟಕ ಸರ್ಕಾರ) ಆರ್ಥಿಕ ವರ್ಷದ 2006-07 ರಿಂದ ಮೌಲ್ಯಾಧಾರಿತ ತೆರಿಗೆಯನ್ನು ಭರಿಸುವುದನ್ನು ನಿರ್ಧರಿಸಿರುವುದಿಲ್ಲ. ನಿರ್ಧಾರಣೆ ಪೂರ್ಣಗೊಂಡ ನಂತರ ಮೌಲ್ಯಧಾರಿತ ತೆರಿಗೆಯ ದಾಯಿತ್ವವನ್ನು ಮಾತ್ರ ಕಂಡುಹಿಡಿದು, ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.<br>ಆ) ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಇಲಾಖೆಗಳ ಬಿಸಿಎಂ ವಿದ್ಯಾರ್ಥಿ ನಿಲಯ ಕಟ್ಟಡ ಕಾಮಗಾರಿಗಳಲ್ಲಿ ಕಂಪನಿಯು ಸದರಿ ಮೊತ್ತವನ್ನು ವಸೂಲಿ ಮಾಡುವ ಪ್ರಯತ್ನದಲ್ಲಿದ್ದು ಹಾಗೂ ವಸೂಲಿ |

| | | |
|---|---|---|
| | ಇ) ನಿಗದಿತ ವೇಳೆಯಲ್ಲಿ ಜಬಲ್‌ಪುರ ಯೋಜನೆಯ ಕಾಮಗಾರಿ ಪೂರ್ಣಗೊಳಿಸದಿದ್ದ ಕಾರಣದಿಂದಾಗಿ ಸಂದಾಯ ಮಾಡಿದ ರೂ.201.21 ಲಕ್ಷದಲ್ಲಿ ಇಎಂಡಿ, ಕಾರ್ಯಾಧಾರಿತ ಭದ್ರತಾ ಠೇವಣಿ ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಹೆಚ್ಚುವರಿ ಭದ್ರತಾ ಠೇವಣಿಗಳನ್ನು ವಹಿಸಿಕೊಟ್ಟ ಪ್ರಾಧಿಕಾರ ಮುಟ್ಟುಗೋಲು ಹಾಕಿಕೊಂಡಿದೆ.<br>(ಉಲ್ಲೇಖ: ಅನುಸೂಚಿ20ರ ಕಂಡಿಕೆ-23). ಆದ್ದರಿಂದ ಪ್ರಸಕ್ತ ವರ್ಷದ ಲಾಭಂಶದ ದಾಯಿತ್ವವನ್ನು ಕಂಡುಹಿಡಿಯಲಾಗಿಲ್ಲ ಮತ್ತು ಕಲ್ಪಿಸಿರುವುದಿಲ್ಲ. | ಮಾಡುವ ವಿಶ್ವಾಸವಿರುವುದರಿಂದ ಅನುಮಾನದ ಮುಂಗಡಕ್ಕೆ ಅವಕಾಶವನ್ನು ಮಾಡಿರುವುದಿಲ್ಲ.<br>ಇ) ಸದರಿ ವಿಷಯವು ತಗಾದೆಯಲ್ಲಿರುವುದರಿಂದ ನಿಗಮವು ಅಧೀಕ್ಷಕ ಅಭಿಯಂತರರು, ಜಬಲ್‌ಪುರ ಮಧ್ಯಪ್ರದೇಶ ಇವರನ್ನು ಸಂಪರ್ಕಿಸಿ ಸದರಿ ವಿಷಯವನ್ನು ಬಗೆಹರಿಸುವುದು. ಈ ಮೇಲ್ಕಂಡ ವಿಷಯದ ಬಗ್ಗೆ ನಿಗಮವು ಹಾಗೂ ಪರಿಣಿತ ಕಾನೂನು ತಜ್ಞರ ಸಲಹೆ ಮೇರೆಗೆ ನಿಗಮದ ಲೆಕ್ಕ ಪತ್ರಗಳಲ್ಲಿ ಸೇರಿಸಲು ಸಾಧ್ಯವಿದ್ದರೂ ಸಹ ಮುಂದಿನ ವರ್ಷದ ಲೆಕ್ಕ ಪತ್ರಗಳಲ್ಲಿ ಪರಿಗಣಿಸಲಾಗುತ್ತದೆ. |
| 9. | 31.3.2009ರಂದು ಇದ್ದಂತೆ, ಕೆಲಸ ಬಾಕಿ ಇರುವ ಹೊಂದಾಣಿಕೆಗಳ ಮೌಲ್ಯ 574.00 ಕೋಟಿ ರೂಪಾಯಿ ಮತ್ತು ಈ ಮೊತ್ತವನ್ನು ಚಾಲ್ತಿ ಸ್ವತ್ತುಗಳಲ್ಲಿ ಸೇರಿಸಲಾಗಿದೆ. 31.3.2009ರಂದು ಇದ್ದಂತೆ ಕೆಲಸ ವಹಿಸಿರುವ ಏಜೆನ್ಸಿಗಳಿಂದ ಬಾಕಿ ಇರುವ ಮೊತ್ತ 744.67 ಕೋಟಿ ರೂಪಾಯಿ ಮೊತ್ತವನ್ನು ಚಾಲ್ತಿ ಹೊಣೆಗಾರಿಕೆಗಳಲ್ಲಿ ಸೇರಿಸಲಾಗಿದೆ. ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕರಿಸಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಗ್ರಾಹಕವಾರು ಅನುಸೂಚಿಗಳು ಲಭ್ಯವಿರುವುದಿಲ್ಲ. ಗ್ರಾಹಕವಾರು ಅನುಸೂಚಿಗಳಿಲ್ಲದೆ, ಜಮಾಖರ್ಚುಪಟ್ಟಿಯಲ್ಲಿ ತೋರಿಸಿರುವ ಬಾಕಿಯನ್ನು ಪರಿಶೀಲಿಸಲಾಗುವುದಿಲ್ಲ.<br>ಕೆಲವು ಪ್ರಕರಣಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು/ ಕಾಲಕಾಲಕ್ಕೆ ಕೆಲಸ ವಹಿಸುವ ಏಜೆನ್ಸಿಗಳಿಗೆ ಒಪ್ಪಿಸಿದ್ದರೂ, ಆನುಷಂಗಿಕ ಹೊಂದಾಣಿಕೆಗಳನ್ನು ಲೆಕ್ಕಪುಸ್ತಕಗಳಲ್ಲಿ ನಮೂದಿಸಿಲ್ಲ. ಲೆಕ್ಕಗಳನ್ನು ಹೊಂದಾಣಿಕೆ ಮಾಡದಿರುವುದರಿಂದ, ಚಾಲ್ತಿ ಸ್ವತ್ತುಗಳ ಮತ್ತು ಚಾಲ್ತಿ ಹೊಣೆಗಾರಿಕೆಗಳ ಬಗ್ಗೆ ಉತ್ಪ್ರೇಕ್ಷೆ ಮಾಡಲು ಅವಕಾಶವಾಗಿದೆ. ಅಂಥ ಉತ್ಪ್ರೇಕ್ಷೆ ಮಾಡಿ ಹೇಳಿರುವ ಮೊತ್ತವನ್ನು ಮತ್ತು ಲಾಭ ಮತ್ತು ನಷ್ಟದ ಲೆಕ್ಕದ ಮೇಲೆ ಆಗುವ ಪರಿಣಾಮ ಯಾವುದಾದರೂ ಇದ್ದರೆ, ಅದನ್ನು ಹೇಳಲಾಗುವುದಿಲ್ಲ. | ಗ್ರಾಹಕವಾರು ಅನುಸೂಚಿಗಳು (574.00 ಕೋಟಿ ರೂಪಾಯಿಗಳಿಗಾಗಿ) ಹಾಗೂ ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕೃತವಾದ ಮೊತ್ತವು (ರೂ.744.67 ಕೋಟಿ) ಕೇಂದ್ರ ಕಛೇರಿಯಲ್ಲಿ ಲಭ್ಯವಿರುತ್ತದೆ. ಎಂದರೆ ಮರುಹೊಂದಾಣಿಕೆಯ ಅಡಿಯಲ್ಲಿ 31.03.2009ರಂದು ಇದ್ದಂತೆ ಹೊಂದಾಣಿಕೆ ಮಾಡಬೇಕಾದ ಕಾಮಗಾರಿಗಳ ಬಗೆಗಿನ, ಅನುಸೂಚಿಗಳು ಕಂಪನಿಯಲ್ಲಿ ಕೂಡಲೇ ದೊರಕುತ್ತವೆ. ಅದನ್ನು ಮುಂಬರುವ ವರ್ಷಗಳಲ್ಲಿ ಹೊಂದಾಣಿಕೆ ಮಾಡಲಾಗುವುದು. ಹಿಂದಿನ ವರ್ಷದಲ್ಲಿ ನಿರ್ವಹಿಸಲಾದ ರೂ.85.34 ಕೋಟಿ ರೂಪಾಯಿಗಳಿಗೆ ಅನುಗುಣವಾಗಿ ಕಂಪನಿಯು 2008-09 ರಲ್ಲಿ ನಿರ್ವಹಿಸಿದ ಕಾಮಗಾರಿಗಳ ಮೊತ್ತ ರೂ.380.08 ಕೋಟಿ ರೂ.ಗಳಷ್ಟನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಮುಂಬರುವ ವರ್ಷಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಗತಿಯಲ್ಲಿರುವ ಕಾಮಗಾರಿಗಳ ಹೊಂದಾಣಿಕೆಯನ್ನು ಪೂರ್ಣಗೊಳಿಸುವ ವಿಶ್ವಾಸವನ್ನು ಕಂಪನಿಯು ಹೊಂದಿರುತ್ತದೆ. |

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆಲೆಪ್‌ಮೆಂಟ್ ಲಿಮಿಟೆಡ್ ಇದರ ಸದಸ್ಯರಿಗೆ ಲೆಕ್ಕಪರಿಶೋಧಕರ ವರದಿ

2009ರ ಮಾರ್ಚ್ 31ರಂದು ಇದ್ದಂತೆ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಇದರ ಜಮಾ ಖರ್ಚು ಪಟ್ಟಿಯ ಮತ್ತು ಅದಕ್ಕೆ ಲಗತ್ತಿಸಲಾದ ಆ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟ ಲೆಕ್ಕದ ಮತ್ತು ಆ ದಿನಾಂಕದಂದು ಕೊನೆಗೊಂಡ ವರ್ಷಕ್ಕೆ ನಗದು ಸ್ವೀಕೃತಿಯ ವಿವರಪಟ್ಟಿಯ ಲೆಕ್ಕಪರಿಶೋಧನೆಯನ್ನು ನಾವು ಮಾಡಿದ್ದೇವೆ. ಈ ಹಣಕಾಸು ವಿವರಪಟ್ಟಿಗಳು ಕಂಪೆನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ನಮ್ಮ ಲೆಕ್ಕ ಪರಿಶೋಧನೆಯನ್ನು ಆಧರಿಸಿ ಈ ಹಣಕಾಸು ವಿವರಣಪಟ್ಟಿಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ.

1. ನಾವು ಲೆಕ್ಕ ಪರಿಶೋಧನೆಯನ್ನು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ಲೆಕ್ಕಪರಿಶೋಧನಾ ಮಾನದಂಡಗಳಿಗನುಸಾರವಾಗಿ ಮಾಡಿದ್ದೇವೆ. ಈ ಮಾನದಂಡಗಳ ಪ್ರಕಾರ ಹಣಕಾಸು ವಿವರಣ ಪಟ್ಟಿಗಳು ಮುಖ್ಯ ತಪ್ಪು ಹೇಳಿಕೆಗಳಿಂದ ಮುಕ್ತವಾಗಿದೆ ಎಂಬ ಬಗ್ಗೆ ಮುಕ್ತ ಭರವಸೆ ಪಡೆಯುವ ರೀತಿಯಲ್ಲಿ ಲೆಕ್ಕ ಪರಿಶೋಧನೆಯನ್ನು ಯೋಜಿಸಿ ಮಾಡಬೇಕಾಗುತ್ತದೆ. ಪರೀಕ್ಷಾರ್ಥ ಆಧಾರದ ಮೇಲೆ ಹಣಕಾಸು ವಿವರಣ ಪಟ್ಟಿಗಳಲ್ಲಿನ ಮೊಬಲಗುಗಳು ಮತ್ತು ವಿವರಣೆಗಳನ್ನು ಬೆಂಬಲಿಸುವ ಸಾಕ್ಷ್ಯಗಳನ್ನು ಪರೀಕ್ಷಿಸುವುದನ್ನು ಲೆಕ್ಕಪರಿಶೋಧನೆ ಒಳಗೊಳ್ಳುತ್ತದೆ. ಲೆಕ್ಕ ಪರಿಶೋಧನೆಯು, ಆಡಳಿತ ವರ್ಗವು ಬಳಸಿದ ಲೆಕ್ಕನಿರ್ವಹಣಾ ತತ್ವಗಳ ಮತ್ತು ಮುಖ್ಯ ಅಂದಾಜುಗಳ ಮೌಲ್ಯಮಾಪನ ಹಾಗೂ ಒಟ್ಟಾರೆ ಹಣಕಾಸು ವಿವರಣ ಪಟ್ಟಿಗಳ ಮೌಲ್ಯಮಾಪನವನ್ನು ಒಳಗೊಳ್ಳುತ್ತದೆ. ನಾವು ನೀಡಿರುವ ಅಭಿಪ್ರಾಯಕ್ಕೆ ನಾವು ನಡೆಸಿರುವ ಲೆಕ್ಕಪರಿಶೋಧನೆ ಆಧಾರವನ್ನು ಒದಗಿಸುತ್ತದೆ ಎಂದು ನಾವು ಭಾವಿಸಿದ್ದೇವೆ.

2. ಕಂಪನಿಗಳ ಅಧಿನಿಯಮ 1956ರ 227ನೇ ಪ್ರಕರಣದ 4(ಎ) ಉಪಪ್ರಕರಣದ ನಿಬಂಧನೆಗಳಿಗನುಸಾರ ಕೇಂದ್ರ ಸರ್ಕಾರವು ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರ ಮೂಲಕ ಅಗತ್ಯಪಡಿಸಲಾದಂತೆ ಸದರಿ ಆದೇಶದ 4 ಮತ್ತು 5ನೇ ಕಂಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳ ಬಗ್ಗೆ ಒಂದು ವಿವರಣಪಟ್ಟಿಯನ್ನು ಅನುಬಂಧ 1ರಲ್ಲಿ ಮತ್ತು ಮಾಡಲಾದ ಪಲ್ಲಟಗಳ ಬಗ್ಗೆ ವಿವರಣಪಟ್ಟಿಯನ್ನು ಅನುಬಂಧ 2ರಲ್ಲಿ ಲಗತ್ತಿಸಲಾಗಿದೆ.

3. ಮೇಲೆ 2ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿರುವ ಅನುಬಂಧದಲ್ಲಿ ವ್ಯಕ್ತಪಡಿಸಿರುವ ನಮ್ಮ ಅಭಿಪ್ರಾಯಗಳಿಗೆ ಒಳಪಟ್ಟು ಮತ್ತು ಹೆಚ್ಚಿಗೆಯಾಗಿ ಈ ಮುಂದಿನಂತೆ ವರದಿ ಮಾಡುತ್ತೇವೆ:

ಎ) ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅಗತ್ಯವೆಂದು ನಾವು ತಿಳಿದಿರುವ ಮತ್ತು ನಂಬಿರುವ ಎಲ್ಲ ಮಾಹಿತಿ ಮತ್ತು ವಿವರಣೆಗಳನ್ನು ಪಡೆದುಕೊಂಡಿದ್ದೇವೆ;

ಬಿ) ಕಾನೂನು ಅಗತ್ಯಪಡಿಸುವ ಸರಿಯಾದ ಲೆಕ್ಕ ಪುಸ್ತಕಗಳನ್ನು ಕಂಪನಿ ನಿರ್ವಹಿಸಿದೆಯೆಂದು ಆ ಪುಸ್ತಕಗಳನ್ನು ನಾವು ಪರಿಶೀಲಿಸಿದುದರಿಂದ ತಿಳಿದು ಬಂದಿದೆ.

ಸಿ) ಈ ವರದಿಯಲ್ಲಿ ಪರಿಶೀಲಿಸಲಾಗಿರುವ ಜಮಾ ಖರ್ಚು ಪಟ್ಟಿ, ಲಾಭ ಮತ್ತು ನಷ್ಟಗಳ ಲೆಕ್ಕ ಮತ್ತು ನಗದು ಹರಿವು ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ, ಈ ವರದಿಯಲ್ಲಿ ಪರಿಶೀಲಿಸಲಾಗಿರುವ ಜಮಾ-ಖರ್ಚು ಪಟ್ಟಿ ಮತ್ತು ಲಾಭ ನಷ್ಟಗಳ ಲೆಕ್ಕ ಮತ್ತು ನಗದು ಹರಿವು ವಿವರಣಪಟ್ಟಿಗಳು ಕಂಪನಿಗಳ ಅಧಿನಿಯಮ, 1956ರ 211ನೇ ಪ್ರಕರಣದ (3ಸಿ) ಪ್ರಕರಣದಲ್ಲಿ ಉಲ್ಲೇಖಿಸಲಾದ ಕಡ್ಡಾಯ ಲೆಕ್ಕ ನಿರ್ವಹಣೆ ಮಾನದಂಡಗಳಿಗೆ ಅನುಸಾರವಾಗಿವೆ.

ಇ) ಕಂಪನಿ ವ್ಯವಹಾರಗಳ ಇಲಾಖೆಯು 21 ಅಕ್ಟೋಬರ್ 2003ರಂದು ಹೊರಡಿಸಿದ ಮತ್ತು ಭಾರತದ ರಾಜಪತ್ರ, ವಿಶೇಷ ಸಂಚಿಕೆ ಭಾಗ 2, ವಿಭಾಗ 3(1)ರಲ್ಲಿ ಪ್ರಕಟವಾದ ಅಧಿಸೂಚನೆ ಸಂ. ಜಿಎಸ್‌ಆರ್ 829 (ಇ) ಪ್ರಕಾರ ಈ ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ ಕಂಪನಿಗಳ ಅಧಿನಿಯಮ, 1956ರ 274ನೇ ಪ್ರಕರಣದ (1)ನೇ ಉಪ ಪ್ರಕರಣದ (ಜಿ) ಖಂಡದ ನಿಬಂಧನೆಗಳಲ್ಲಿರುವ ನಿರ್ದೇಶಕರ ಅನರ್ಹತೆಗಳಿಗೆ ಸಂಬಂಧಿಸಿದ ಉಪಬಂಧಗಳು ಈ ಕಂಪನಿಗೆ ಅನ್ವಯವಾಗುವುದಿಲ್ಲ.

ಎಫ್) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತ ಮಾಹಿತಿಯ ಮಟ್ಟಿಗೆ ಮತ್ತು ನಮಗೆ ನೀಡಿರುವ ವಿವರಣೆಗಳ ಪ್ರಕಾರ, ಸದರಿ ಲೆಕ್ಕಗಳು, ಪ್ರಮುಖ ಲೆಕ್ಕ ನಿರ್ವಹಣೆ ನೀತಿಗಳೊಂದಿಗೆ ಮತ್ತು ಅದರ ಮೇಲೆ ಮಾಡಿದ ಇತರ ಟಿಪ್ಪಣಿಗಳೊಂದಿಗೆ ಓದಿಕೊಂಡಂತೆ,-

i) 2009ರ ಮಾರ್ಚ್ 31ರಂದು ಇದ್ದಂತೆ ಕಂಪನಿಯ ಪ್ರಸ್ತುತ ಪರಿಸ್ಥಿತಿಯ ಜಮಾ ಖರ್ಚು ಪಟ್ಟಿಗೆ ಸಂಬಂಧಪಡುವಷ್ಟರಮಟ್ಟಿಗೆ;

ii) ಆ ದಿನಾಂಕದಂದು ಕೊನೆಗೊಳ್ಳುವ ವರ್ಷಕ್ಕೆ ಕಂಪನಿಯ ಲಾಭ ಮತ್ತು ನಷ್ಟ ಲೆಕ್ಕಕ್ಕೆ ಸಂಬಂಧಪಡುವಷ್ಟರಮಟ್ಟಿಗೆ;

iii) ಆ ದಿನಾಂಕದಂದು ಕೊನೆಗೊಳ್ಳುವ ವರ್ಷಕ್ಕೆ ಕಂಪನಿಯ ನಗದು ಹರಿವು ನಗದು ಹರಿವು ವಿವರಣಪಟ್ಟಿಗೆ ಸಂಬಂಧಪಡುವಷ್ಟರ ಮಟ್ಟಿಗೆ;

**ಅಶೋಕ್‌ಕುಮಾರ್, ಪ್ರಭಾಶಂಕರ್**
**ಮತ್ತು ಕಂಪನಿ ಅವರ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**

ಸಹಿ/-
(ಕೆ.ಎನ್. ಪ್ರಭಾಶಂಕರ್)
ಪಾಲುದಾರ
ಸದಸ್ಯತ್ವ ಸಂ. 19575.

ಸ್ಥಳ: ಬೆಂಗಳೂರು
ದಿನಾಂಕ:06/11/2009

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್ ಇದರ 2008ರ ಏಪ್ರಿಲ್ 11ನೇ ದಿನಾಂಕದ ಲೆಕ್ಕಪರಿಶೋಧಕರ ವರದಿಗೆ ಅನುಬಂಧ

## ಅನುಬಂಧ-I

**ಅದೇ ದಿನಾಂಕದ ನಮ್ಮ ವರದಿಯ ಕಂಡಿಕೆ 2ರಲ್ಲಿ ಉಲ್ಲೇಖಿಸಲಾಗಿದೆ.**

1. ಎ) ಕಂಪನಿಯು, ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಸ್ಥಿರ ಆಸ್ತಿಯ ಸ್ಥಳ ಮತ್ತು ಪ್ರಮಾಣದ ವಿವರಗಳೂ ಒಳಗೊಂಡಂತೆ ಪೂರ್ಣ ವಿವರಗಳನ್ನು ತೋರಿಸುವ ಸರಿಯಾದ ದಾಖಲೆಗಳನ್ನು ಇಟ್ಟಿದೆ.

   ಬಿ) ನಮಗೆ ವಿವರಿಸಿರುವಂತೆ ಮತ್ತು ನಮಗೆ ಒದಗಿಸಲಾಗಿರುವ ದಾಖಲೆಗಳ ಪ್ರಕಾರ ಕಂಪನಿ ಸ್ಥಿರ ಆಸ್ತಿಗಳಿಗೆ ಸರಿಯಾದ ದಾಖಲೆಗಳನ್ನು ಇಟ್ಟಿದೆ. ವರ್ಷದ ಅವಧಿಯಲ್ಲಿ ಅಡಳಿತ ವರ್ಗ ಸ್ಥಿರ ಆಸ್ತಿಗಳನ್ನು ಸರಿಯಿದೆಯೇ ಎಂದು ವಾಸ್ತವವಾಗಿ ಪರೀಕ್ಷಿಸಲಾಗಿ ನಮ್ಮ ಅಭಿಪ್ರಾಯದಲ್ಲಿ, ಕಂಪನಿಯ ಗಾತ್ರ ಮತ್ತು ವ್ಯವಹಾರದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡಾಗ, ಸತ್ಯಾಪನೆಯ ಕಾರ್ಯರೀತಿ ಯಥೋಚಿತವಾಗಿದೆ. ಕಂಪನಿಯ ವ್ಯತ್ಯಾಸಗಳನ್ನು ಸ್ಥಿರ ಆಸ್ತಿಯ ರಿಜಿಸ್ಟರಿನೊಂದಿಗೆ ಹೊಂದಾಣಿಕೆ ಮಾಡಿಲ್ಲ.

   ಸಿ) ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಈ ವರ್ಷದಲ್ಲಿ ಸ್ಥಿರ ಆಸ್ತಿಯ ಗಣನೀಯ ಭಾಗವನ್ನು ವಿಲೆ ಮಾಡಿಲ್ಲ ಮತ್ತು ಕಂಪನಿಯ ಸ್ಥಾನಮಾನದಲ್ಲಿ ವ್ಯತ್ಯಾಸವಾಗಿಲ್ಲ.

2. ಎ) ನಮಗೆ ವಿವರಣೆ ನೀಡಿದಂತೆ ಆಡಳಿತ ವರ್ಗದವರು ಬೆಲೆಪಟ್ಟಿಗಳ ವಾಸ್ತವಿಕ ಸತ್ಯಾಪನೆಯನ್ನು ಮಾಡಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ ಸತ್ಯಾಪನೆಯ ಅವಧಿಗಳಲ್ಲಿನ ಅಂತರ ಕಂಪನಿಯ ಗಾತ್ರಕ್ಕೆ ಸೂಕ್ತವಾಗಿಲ್ಲ ಮತ್ತು ಅನುಗುಣವಾಗಿಲ್ಲ.

   ಬಿ) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಕೊಟ್ಟ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಆಡಳಿತ ವರ್ಗದವರು ಬೆಲೆಪಟ್ಟಿಗಳ ವಾಸ್ತವಿಕ ಸತ್ಯಾಪನೆಗೆ ಅನುಸರಿಸಿದ ಕಾರ್ಯವಿಧಾನಗಳು ಕಂಪನಿಯ ಗಾತ್ರ ಮತ್ತು ಅದರ ವ್ಯವಹಾರದ ಸ್ವರೂಪಕ್ಕೆ ಸಂಬಂಧಿಸಿದಂತೆ ಸಮರ್ಪಕವಾಗಿವೆ ಮತ್ತು ಸಾಕಾಗುವಂತಿವೆ.

   ಸಿ) ಕಂಪನಿಯು ಬೆಲೆಪಟ್ಟಿಗಳ ಸರಿಯಾದ ದಾಖಲೆಗಳನ್ನು ನಿರ್ವಹಿಸಿದೆ. ನಮಗೆ ವಿವರಿಸಿದಂತೆ, ಬೆಲೆಪಟ್ಟಿಗಳ ವಾಸ್ತವಿಕ ಸತ್ಯಾಪನೆಯನ್ನು ಮಾಡಿದಾಗ, ಪುಸ್ತಕದ ದಾಖಲೆಗಳೊಂದಿಗೆ ಹೋಲಿಸಿದರೆ ಮುಖ್ಯ ವ್ಯತ್ಯಾಸಗಳು ಇರಲಿಲ್ಲ. ವಾಸ್ತವಿಕ ದಾಸ್ತಾನು ಮತ್ತು ಪುಸ್ತಕದಲ್ಲಿ ತೋರಿಸಿರುವ ದಾಸ್ತಾನುಗಳ ಮಧ್ಯೆ ಇರುವ ಕೆಲವು ಸಣ್ಣ ವ್ಯತ್ಯಾಸಗಳನ್ನು ಲೆಕ್ಕ ಪುಸ್ತಕಗಳಲ್ಲಿ ಸಮರ್ಪಕ ರೀತಿಯಲ್ಲಿ ಸರಿಪಡಿಸಲಾಗಿದೆ.

3. ಎ) ಕಂಪನಿಯು, ಕಂಪನಿಗಳ ಅಧಿನಿಯಮ, 1956ರ 301ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಿರುವ ರಿಜಿಸ್ಟರಿನಲ್ಲಿ ಪಟ್ಟಿ ಮಾಡಿರುವ ಕಂಪನಿಗಳು, ಫರ್ಮುಗಳ ಅಥವಾ ಇತರ ಪಕ್ಷಕಾರರಿಂದ ಭದ್ರತೆಯಿರುವ ಅಥವಾ ಭದ್ರತೆಯಿಲ್ಲದಿರುವ ಸಾಲಗಳನ್ನು ಮಂಜೂರು ಮಾಡಿಲ್ಲ ಅಥವಾ ತೆಗೆದುಕೊಂಡಿಲ್ಲ.

   ಬಿ) ಕಂಪನಿಯು ಸಾಲಗಳನ್ನು ಮಂಜೂರು ಮಾಡದಿರುವುದರಿಂದ ಅಥವಾ ತೆಗೆದುಕೊಳ್ಳದಿರುವುದರಿಂದ, ಬಡ್ಡಿ, ಸಾಲದ ನಿಬಂಧನೆಗಳು ಮತ್ತು ಷರತ್ತುಗಳು, ಮರುಸಂದಾಯ ಮತ್ತು 1ಲಕ್ಷ ರೂ.ಗಿಂತ ಹೆಚ್ಚಿನ ಅಸಲು ಹಣ ಬಾಕಿ ಉಳಿದಿರುವುದಕ್ಕೆ ಸಂಬಂಧಿಸಿದ ಖಂಡಗಳು ಅನ್ವಯಿಸುವುದಿಲ್ಲ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಬೆಲೆ ಪಟ್ಟಿಯಲ್ಲಿರುವ ಎಲ್ಲ ಸಾಮಾನುಗಳ ಖರೀದಿಗೆ ಮತ್ತು ಸ್ಥಿರ ಆಸ್ತಿಗಳ ಮತ್ತು ಸರಕುಗಳು, ನಿರ್ಮಾಣ ಸಾಮಗ್ರಿಗಳು, ಸ್ಥಾವರಗಳು ಮತ್ತು ಯಂತ್ರ ಸಾಮಗ್ರಿಗಳು ಮತ್ತು ಪರಿಕರಗಳು ಮತ್ತು ಇತರ ನಿರ್ಮಾಣ

ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಇತರ ಸ್ವತ್ತುಗಳ ಖರೀದಿಗೆ ಕಂಪನಿಯ ಗಾತ್ರ ಮತ್ತು ಅದರ ವ್ಯವಹಾರದ ಸ್ವರೂಪಕ್ಕೆ ಅನುಗುಣವಾಗಿ ಪರ್ಯಾಪ್ತ ಆಂತರಿಕ ನಿಯಂತ್ರಣ ವಿಧಾನಗಳಿಲ್ಲ. ನಾವು ಲೆಕ್ಕ ಪರಿಶೋಧನೆ ಮಾಡುವಾಗ, ನಿರ್ಮಾಣ ಸಾಮಗ್ರಿ ಮುಂತಾದುವನ್ನು ಖರೀದಿ ಮಾಡುವುದಕ್ಕೆ ಸಂಬಂಧಿಸಿದಂತೆ ಆಂತರಿಕ ನಿಯಂತ್ರಣ ಕಾರ್ಯವಿಧಾನಗಳಲ್ಲಿರುವ ಮುಖ್ಯ ದೋಷವನ್ನು ಸರಿಪಡಿಸುವಲ್ಲಿ ಎಂದರೆ ನಿರ್ಧಿಷ್ಟವಾಗಿ ಮುಂಗಡಗಳ ಲೆಕ್ಕಗಳು ಇತ್ಯಾದಿಗಳನ್ನು ಹೊಂದಾಣಿಕೆ ಮಾಡುವಲ್ಲಿ ವಿಫಲರಾಗುತ್ತಲೇ ಇರುವುದನ್ನು ಗಮನಿಸಿದ್ದೇವೆ.

5. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಗಳ ಅಧಿನಿಯಮ 1956ರ 301ನೇ ಪ್ರಕರಣದ ಮೇರೆಗೆ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದಿಸಬೇಕಾದ ಯಾವುವೇ ವ್ಯವಹಾರಗಳು ಇಲ್ಲ ಎಂದು ನಾವು ಅಭಿಪ್ರಾಯ ಪಡುತ್ತೇವೆ.

6. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಸಾರ್ವಜನಿಕರಿಂದ ಯಾವುವೇ ಠೇವಣಿಗಳನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಕಂಪನಿಗಳ ಅಧಿನಿಯಮ 1956ರ 58ಎ ಪ್ರಕರಣದ ಉಪಬಂಧಗಳು ಅನ್ವಯಿಸುವುದಿಲ್ಲ.

7. ನಮ್ಮ ಅಭಿಪ್ರಾಯದಲ್ಲಿ, ಕಂಪೆನಿಯು ತನ್ನ ಗಾತ್ರ ಮತ್ತು ವ್ಯವಹಾರ ಸ್ವರೂಪಕ್ಕೆ ಅನುಗುಣವಾದ ಆಂತರಿಕ ಲೆಕ್ಕಪರಿಶೋಧನೆಯ ವ್ಯವಸ್ಥೆಯನ್ನು ಹೊಂದಿದೆ. ಆದರೆ ಆಂತರಿಕ ಲೆಕ್ಕ ಪರಿಶೋಧನೆಯನ್ನು ಬಲಪಡಿಸಬೇಕಾಗಿದೆ.

8. ಭಾರತ ಸರ್ಕಾರವು, ಕಂಪನಿಗಳ ಅಧಿನಿಯಮ 1956ರ 209 (1) (ಡಿ) ಪ್ರಕರಣದ ಅಡಿಯಲ್ಲಿ ದಾಖಲೆಗಳ ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಿಲ್ಲ.

9. ಎ) ಭವಿಷ್ಯ ನಿದಿ (ಪಿ.ಎಫ್), ಇಎಸ್ಐ, ವರಮಾನ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೀಮಾ ಶುಲ್ಕ, ಅಬ್ಕಾರಿ ತೆರಿಗೆ ಮತ್ತು ಇತರ ಶಾಸನಬದ್ಧ ಬಾಕಿಗಳೂ ಸೇರಿದಂತೆ ವಿವಾದರಹಿತವಾದ ಶಾಸನಬದ್ಧ ಬಾಕಿಗಳನ್ನು ಕಂಪನಿಯು ನಿಯತವಾಗಿ ಸಂದಾಯ ಮಾಡುತ್ತಿದೆ. ಕಂಪನಿಯ ದಾಖಲೆಗಳನುಸಾರವಾಗಿ ಮತ್ತು ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು, 2009ರ ಮಾರ್ಚ್ 31ರಂದು ಇರುವಂತೆ ಆರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಯಾವುದೇ ಬಾಕಿಗಳು ಎಂದರೆ, ಭವಿಷ್ಯ ನಿಧಿ,ವರಮಾನ ತೆರಿಗೆ, ಸೀಮಾಶುಲ್ಕ, ಅಬ್ಕಾರಿ ಶುಲ್ಕ, ಉಪಕರ (ಸೆಸ್) ಮತ್ತು ಯಾವುದೇ ಇತರ ಶಾಸನಬದ್ಧ ಬಾಕಿಗಳು ಒಳಗೊಂಡಂತೆ ಅವಿವಾದಿತ ಯಾವುದೇ ಶಾಸನಬದ್ಧ ಬಾಕಿಗಳನ್ನು ಉಳಿಸಿಕೊಂಡಿಲ್ಲ.

ಬಿ) 1,85,890/- ರೂ.ಗಳ ಅಬ್ಕಾರಿ ಶುಲ್ಕದ ಹೊರತಾಗಿ ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು, 2009ರ ಮಾರ್ಚ್ 31ರಂದು ಇರುವಂತೆ ಆರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಯಾವುದೇ ಬಾಕಿಗಳು ಎಂದರೆ, ಭವಿಷ್ಯ ನಿಧಿ, ವರಮಾನ ತೆರಿಗೆ, ಸೀಮಾಶುಲ್ಕ, ಅಬ್ಕಾರಿ ಶುಲ್ಕ, ಉಪಕರ (ಸೆಸ್) ಮತ್ತು ಯಾವುದೇ ಇತರ ಶಾಸನಬದ್ಧ ಬಾಕಿಗಳು ಒಳಗೊಂಡಂತೆ ಅವಿವಾದಿತ ಯಾವುದೇ ಶಾಸನಬದ್ಧ ಬಾಕಿಗಳನ್ನು ಉಳಿಸಿಕೊಂಡಿಲ್ಲ.

10. ಕಂಪನಿಯು, ಈ ಲೆಕ್ಕಪರಿಶೋಧನೆಗೊಳಪಟ್ಟ, ಆರ್ಥಿಕ ವರ್ಷದಲ್ಲಿ ನಗದು ನಷ್ಟವನ್ನು ಅನುಭವಿಸಿಲ್ಲ ಮತ್ತು ನಿಕಟ ಹಿಂದಿನ ಆರ್ಥಿಕ ವರ್ಷದಲ್ಲಿ ನಗದು ನಷ್ಟವನ್ನು ಅನುಭವಿಸಿತ್ತು.

11. ಲೆಕ್ಕಪರಿಶೋಧನಾ ಕಾರ್ಯವಿಧಾನವನ್ನು ಆಧರಿಸಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ನೋಡಲ್ ಅಥವಾ ಹುಡ್ಕೋ ಏಜೆನ್ಸಿಯಾಗಿ, ಯಾವುದೇ ಹಣಕಾಸು ಸಂಸ್ಥೆಗಳಿಗೆ ಅಥವಾ ಬ್ಯಾಂಕುಗಳಿಗೆ ಬಾಕಿಗಳ ಮರುಸಂದಾಯ ಮಾಡುವುದನ್ನು ಕಂಪನಿಯು ತಪ್ಪಿಸಿಲ್ಲ.

12. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ವಿವರಣೆಗಳಿಗೆ ಅನುಸಾರವಾಗಿ ಮತ್ತು ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ, ಕಂಪನಿಯು, ಷೇರುಗಳ, ಡಿಬೆಂಚರುಗಳ ಮತ್ತು ಇತರ ಭದ್ರತೆಗಳ ಒತ್ತೆ ಮೂಲಕ, ಭದ್ರತೆಯ ಆಧಾರದ ಮೇಲೆ ಯಾವುದೇ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಿಲ್ಲ.

13. ಕಂಪನಿಯು, ಒಂದು ಚಿಟ್ ಫಂಡ್ ಸಂಸ್ಥೆ ಅಲ್ಲ ಅಥವಾ ಒಂದು ನಿಧಿ/ ಮ್ಯುಚುಯಲ್ ಬೆನಿಫಿಟ್ ಫಂಡ್/ ಸಂಘ ಅಲ್ಲವೆಂಬುದು ನಮ್ಮ ಅಭಿಪ್ರಾಯ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2003ರ ಖಂಡ 4(xiii) ರ ಉಪಬಂಧಗಳು, ಕಂಪನಿಗೆ ಅನ್ವಯವಾಗುವುದಿಲ್ಲ.

14. ಕಂಪನಿಯು, ಷೇರುಗಳ, ಭದ್ರತೆಗಳ, ಡಿಬೆಂಚರುಗಳ ಮತ್ತು ಇತರ ಹೂಡಿಕೆಗಳ ವ್ಯವಹಾರವನ್ನು ಮಾಡುತ್ತಿಲ್ಲ ಅಥವಾ ವ್ಯಾಪಾರ ಮಾಡುತ್ತಿಲ್ಲ. ಆದ್ದರಿಂದ ಕಂಪೆನಿಗಳ (ಲೆಕ್ಕಪರಿಶೋಧಕರ) ಆದೇಶ 2003ರ ಖಂಡ 4(xiv)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

15. ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರ ಇತರೆ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ತೆಗೆದುಕೊಂಡ ಸಾಲಗಳಿಗಾಗಿ ಕಂಪೆನಿಯು ಜಾಮೀನು (ಗ್ಯಾರಂಟಿ) ನೀಡಿಲ್ಲ.

16. ಸ್ವಚ್ಛ ಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಒಂದು ನೋಡಲ್ ಏಜೆನ್ಸಿಯಾಗಿ ಕಂಪನಿಯು, ಹುಡ್ಕೋ ಲಿಮಿಟೆಡ್‌ನಿಂದ ಪಡೆದುಕೊಂಡ ಸಾವಧಿಕ ಸಾಲವನ್ನು, ಅದನ್ನು ಮಂಜೂರ್ಮಾಡಲಾದ ಉದ್ದೇಶಕ್ಕಾಗಿಯೇ ವಿನಿಯೋಗಿಸಿದೆ.

17. ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರ ಮತ್ತು ಕಂಪನಿಯ ಜಮಾ ಖರ್ಚು ಪಟ್ಟಿಯನ್ನು (ಬ್ಯಾಲೆನ್ಸ್ ಷೀಟ್) ಒಟ್ಟಾರೆ ಪರಿಶೀಲನೆ ಮಾಡಿದಾಗ ಅಲ್ಪಾವಧಿ ಆಧಾರದ ಮೇಲೆ ಪಡೆದುಕೊಂಡ ಯಾವುದೇ ನಿಧಿಗಳನ್ನು ದೀರ್ಘಾವಧಿ ಹೂಡಿಕೆಗಾಗಿ ಬಳಸಲಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ.

18. ಕಂಪನಿಗಳ ಅಧಿನಿಯಮ, 1956ರ 301ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದಿಸಲಾದ ಪಕ್ಷಕಾರರಿಗೆ (ಪಾರ್ಟಿಗಳಿಗೆ) ಮತ್ತು ಕಂಪೆನಿಗಳಿಗೆ ಆದ್ಯತೆಯ ಮೇಲೆ ಷೇರುಗಳನ್ನು ಕಂಪೆನಿಯು ಹಂಚಿಕೆ ಮಾಡಿಲ್ಲ.

19. ಕಂಪನಿಯು ಯಾವುದೇ ಡಿಬೆಂಚರುಗಳನ್ನು ನೀಡಿಲ್ಲ.

20. ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಲೆಕ್ಕಪುಸ್ತಕಗಳ ಪರಿಶೀಲನೆಯಿಂದ, ಕಂಪನಿಯು ಸಾರ್ವಜನಿಕ ನೀಡಿಕೆಯ ಮೂಲಕ ಯಾವುದೇ ಹಣವನ್ನು ಪಡೆದುಕೊಂಡಿಲ್ಲವೆಂದು ತಿಳಿದುಬರುತ್ತದೆ.

21. ನಮ್ಮ ಅಭಿಪ್ರಾಯದಂತೆ ಹಾಗೂ ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕಂಪನಿಯ ನೌಕರರು ಎಸಗಿದ 19 ಮೋಸದ ಪ್ರಕರಣಗಳು ಕಂಪನಿಯ ಗಮನಕ್ಕೆ ಬಂದಿವೆ ಅಥವಾ ವರದಿಯಾಗಿವೆ.

# ಅನುಬಂಧ-II

## ಸಮಸಂಖ್ಯೆ ದಿನಾಂಕದ ನಮ್ಮ ವರದಿಯ 2ನೇ ಪ್ಯಾರಾದಲ್ಲಿ ಉಲ್ಲೇಖಿಸಲಾಗಿದೆ.

1. **ಆದಾಯ ಗುರುತಿಸುವುದು:**
ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದ ಆದಾಯವನ್ನು ***AS***–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ದರ ಪಟ್ಟಿಯ ದರದಂತೆ ನಿರ್ವಹಿಸಿದ ಮೌಲ್ಯದ ಕಾಮಗಾರಿಗಳನ್ನು ಹೊರತುಪಡಿಸಿ, ನಿಗಮದ ಸೇವಾ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಪ್ರಸಕ್ತ ವರ್ಷದ ಆದಾಯದಲ್ಲಿ ವ್ಯತ್ಯಾಸವನ್ನು ಗುರಿತಿಸಲಾಗಿ ಅದನ್ನು ಸಮರ್ಥಿಸಿಕೊಳ್ಳಲಾಗಲಿಲ್ಲ.

2. ಪ್ರಸಕ್ತ ವರ್ಷದಲ್ಲಿ ಸಂಸ್ಥೆಯಲ್ಲಿರುವ ಕೆಲವು ನಿರುಪಯುಕ್ತ ಸ್ವತ್ತುಗಳನ್ನು ಗುರುತಿಸಲಾಗಿಲ್ಲ ಹಾಗೂ ಅದರ ಮೊತ್ತವನ್ನು ಲೆಕ್ಕದಿಂದ ತೆಗೆದುಹಾಕಿರುವುದಿಲ್ಲ. ಆದ್ದರಿಂದ ಸ್ವತ್ತುಗಳ ಮೌಲ್ಯವನ್ನು ಅಧಿಕವೆಂದು ಪರಿಗಣಿಸಿದೆ.

3. ಹೊಂದಾಣಿಕೆ ಮಾಡಬೇಕಾದ ಕಾಮಗಾರಿ ಮೌಲ್ಯವು ಪ್ರತಿಯೊಂದು ಕಾಮಗಾರಿಯ ವಿವರಗಳು ಮತ್ತು ಪ್ರಗತಿಯಲ್ಲಿರುವ ಅಂಥ ಕಾಮಗಾರಿಯ ಮೌಲ್ಯ, ಇವುಗಳಿಂದ ಸಮರ್ಥಿತವಾಗಿಲ್ಲ. ಸತ್ಯಾಪನೆ ಮಾಡತಕ್ಕ ದಾಖಲೆಗಳು ಇಲ್ಲದಿರುವುದರಿಂದ ಅಂಥ ಮೌಲ್ಯದ ಸರಿತನವನ್ನು ಖಚಿತಪಡಿಸಲಾಗುವುದಿಲ್ಲ.

4. 2003–04 ರಿಂದ 2008–09ರವರೆಗಿನ ವರ್ಷಗಳಿಗೆ ಸಂಬಂಧಪಡುವ ಚಿಲ್ಲರೆ ಸಾಲಿಗರ ಶೀರ್ಷಿಕೆಯ ಅಡಿಯಲ್ಲಿ ಇರುವ ಶಿಲ್ಕುಗಳನ್ನು ಪಕ್ಷಕಾರರು (ಪಾರ್ಟಿಗಳು) ಸ್ಥಿರೀಕರಿಸಿಲ್ಲ. ಅಲ್ಲದೆ, 2003–04 ರಿಂದ 2005–06ನೇ ಸಾಲಿನವರೆಗೆ ರೂ.2753.90 ಲಕ್ಷ ರೂಪಾಯಿಗಳ ಲೆಕ್ಕವು ಅವಧಿ ಪರಿಮಿತಿಯಿಂದ ಪ್ರತಿಬಂಧಿತವಾಗಿದೆ ಮತ್ತು ಸಂಶಯಾಸ್ಪದ ಸಾಲ ಯಾವುದೇ ಇದ್ದರೆ, ಆ ಬಗ್ಗೆ ಕಂಪನಿಯು ಯಾವುದೇ ಏರ್ಪಾಡು ಮಾಡಿಲ್ಲ. ಆದ್ದರಿಂದ ಪ್ರಸಕ್ತ ವರ್ಷದ ಲಾಭವನ್ನು ಹೆಚ್ಚುವರಿಯಾಗಿ ಪರಿಗಣಿಸಿದೆ.

5. ಸರ್ಕಾರದಲ್ಲಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಠೇವಣಿಗಳೂ ಒಳಗೊಂಡಂತೆ ಸಾಲಗಳು ಮತ್ತು ಮುಂಗಡಗಳನ್ನು ಸ್ಥಿರೀಕರಿಸಿ ಸಮರ್ಥಿಸಿಲ್ಲ. ರೂ.1453.67 ಲಕ್ಷ ರೂಪಾಯಿಗಳ ಮೊತ್ತದ 'ಇತರರಿಗೆ ಸಾಲಗಳು ಮತ್ತು ಮುಂಗಡಗಳ' ಸಂಬಂಧದಲ್ಲಿ, ಮರು ಹೊಂದಾಣಿಕೆ ಮತ್ತು ಅನುಸೂಚಿಗಳನ್ನು ಇಂದಿನವರೆಗೆ ಪೂರ್ಣಗೊಳಿಸಿಲ್ಲ. ಇದರಲ್ಲಿ ಹಳೆಯ ಶಿಲ್ಕುಗಳು ಒಳಗೊಂಡಿದೆ. ಇದಕ್ಕಾಗಿ ಪರಿಶೀಲನೆ ಮತ್ತು ಅನುಸರಣಾ ಕ್ರಮಕೈಗೊಳ್ಳಬೇಕಾಗಿದೆ. ವಸೂಲ್ಮಾಡಬೇಕಾಗಿದ್ದ ಸಾಲಗಳು ಮತ್ತು ಮುಂಗಡಗಳನ್ನು ಖಚಿತಪಡಿಸಿಲ್ಲದಿರುವುದರಿಂದ ಕಂಪನಿಯ ಲಾಭ/ನಷ್ಟದ ಮೇಲಾಗುವ ಅದರ ಸಾಪೇಕ್ಷ ಪರಿಣಾಮವನ್ನು ಖಚಿತಪಡಿಸಲಾಗುವುದಿಲ್ಲ.

6. ಚಿಲ್ಲರೆ ಸಾಲಿಗರಿಂದ ಮತ್ತು ಇತರ ಪಕ್ಷಕಾರರಿಂದ ಸಂಗ್ರಹಿಸಿದ ಮುಂಗಡ ಠೇವಣಿ (ಇ.ಎಂ.ಡಿ.) ರೂ.731.23 ಲಕ್ಷ ರೂಪಾಯಿಗಳಷ್ಟಾಗುತ್ತಿದ್ದು, ಅದನ್ನು ಸ್ಥಿರೀಕರಿಸಬೇಕಾಗಿದೆ ಮತ್ತು ಮರು ಹೊಂದಾಣಿಕೆಗೊಳಪಡಿಸಬೇಕಾಗಿದೆ. ಮೇಲ್ಕಂಡ ಲೆಕ್ಕಗಳ ಬಗ್ಗೆ ಅನುಸೂಚಿಗಳನ್ನು ಇಂದಿನವರೆಗೆ ಪೂರ್ಣಗೊಳಿಸಿಲ್ಲ.

7. ಚಿಲ್ಲರೆ ಸಾಲಿಗರ ಬಾಬುವಾರು ಶಿಲ್ಕು, ಇತರ ಹೊಣೆಗಳು, ಇಎಮ್‌ಡಿ, ನಗದಾಗಿ ಅಥವಾ ವಸ್ತು ರೂಪದಲ್ಲಿ ವಸೂಲಾಗತಕ್ಕ ಮುಂಗಡಗಳು ಮತ್ತು ಠೇವಣಿಗಳ ಲೆಕ್ಕಗಳು ಲಭ್ಯವಿಲ್ಲ. ಆದ್ದರಿಂದ 01–04–1996 ರಂದು ಇರುವಂತೆ ಶಿಲ್ಕಿನಲ್ಲಿ ಕೆಲವು ಪರಿಯೋಜನೆಗಳ ಸಂಬಂಧದಲ್ಲಿ (ಪ್ರಾಜೆಕ್ಟ್‌ಗಳಲ್ಲಿ) ನಿರ್ವಹಿಸಲಾದ ಬಾಬುವಾರು ಲೆಡ್ಜರ್ ಲೆಕ್ಕಗಳು ಒಳಗೊಂಡಿಲ್ಲ. ಕೇಂದ್ರ ಕಚೇರಿಯ ದಾಖಲೆಗಳಲ್ಲಿರುವಂತೆ ಮತ್ತು ಪ್ರಾಜೆಕ್ಟ್ ಪುಸ್ತಕದಲ್ಲಿರುವಂತೆ ಹೊಂದಾಣಿಕೆ ಮಾಡಬೇಕಾಗಿದೆ. ಈ ಲೆಕ್ಕಗಳಲ್ಲಿರುವ ಅನೇಕ ಬಾಬುಗಳು ದೀರ್ಘಕಾಲ ಬಾಕಿ ಇರುವ ಶಿಲ್ಕುಗಳನ್ನು ಒಳಗೊಂಡಿದ್ದು ಅವುಗಳನ್ನು

ಈವರೆಗೆ, ಬಾಬುವಾರು ವಿವರಗಳನ್ನು/ ಪ್ರತ್ಯೇಕ ವಿವರಗಳನ್ನು, ಈ ಲೆಕ್ಕಗಳ ವಸೂಲಿ ಸಾಧ್ಯತೆ ಅಥವಾ ಸಾಧ್ಯತೆ ಇಲ್ಲದಿರುವುದನ್ನು ಖಚಿತಪಡಿಸಿಲ್ಲ ಮತ್ತು ಅಗತ್ಯಪಡಿಸಬೇಕಾದ ಯಾವುದಾದರೂ ಸಂಶಯಾಸ್ಪದ ಸಾಲಗಳು, ಹೊಂದಾಣಿಕೆಗಳು ಇದ್ದರೆ, ಅವುಗಳನ್ನು ಮಾಡಿಲ್ಲ. ಅಲ್ಲದೆ ಈ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಹೇಳಿದ ಶಿಲ್ಕುಗಳು, ನಿಜವಾದ ಸ್ಥಿತಿಯನ್ನು ತಿಳಿಸುತ್ತಿಲ್ಲವಾದ್ದರಿಂದ ಕೆಲವು ಪಕ್ಷಕಾರರ ಖರ್ಚು ಶಿಲ್ಕನ್ನು ಇತರ ಪಕ್ಷಕಾರರ ಜಮಾ ಶಿಲ್ಕಿನೊಡನೆ ಸೇರಿಸಲಾಗಿದೆ, ಅದೇ ರೀತಿ ಜಮಾ ಶಿಲ್ಕನ್ನು ಖರ್ಚಿನ ಶಿಲ್ಕಿನೊಡನೆ ಸೇರಿಸಲಾಗಿದೆ ಮತ್ತು ನಿವ್ವಳ ಶಿಲ್ಕನ್ನು ಸಂದಾಯ ಮಾಡತಕ್ಕ/ ವಸೂಲ್ಮಾಡತಕ್ಕ ಶಿಲ್ಕುಗಳೆಂದು ತೋರಿಸುವ ಬದಲು, ಜಮಾ ಖರ್ಚು ಪಟ್ಟಿಯಲ್ಲಿ ತೋರಿಸಲಾಗಿದೆ

8. ನಿಗಮವು ಈ ಕೆಳಕಂಡ ದಾಯಿತ್ವವನ್ನು ಒದಗಿಸಿರುವುದಿಲ್ಲ:

ಅ) ನಮೂನೆ 240 ರ ವಾರ್ಷಿಕ ವಹಿವಾಟಿನ ಮತ್ತು ಪ್ರಗತಿಯಲ್ಲಿನ ಕಾಮಗಾರಿಗಳ ಮೊತ್ತದ ನಡುವೆ ಇರುವ ವ್ಯತ್ಯಾಸದಿಂದಾಗಿ ಮೌಲ್ಯಾಧಾರಿತ ತೆರಿಗೆಯ ದಾಯಿತ್ವದ ವ್ಯತ್ಯಾಸವನ್ನು ಕಂಡುಹಿಡಿಯಲಾಗಿಲ್ಲ ಮತ್ತು ಕಲ್ಪಿಸಿರುವುದಿಲ್ಲ. (ಉಲ್ಲೇಖ:ಕಂಡಿಕೆ 19 (ಬಿ) ರ ಅನಸೂಚಿ 20).

ಆ) ಬಿಸಿಎಂ ವಿದ್ಯಾರ್ಥಿ ನಿಲಯ ಕಟ್ಟಡದ ಕಾಮಗಾರಿಯಿಂದ ನಿರ್ಣೀತ ಹಾನಿಪೂರಣ (ಲಿಕ್ವಿಡೇಟೆಡ್ ಡಾಮೇಜಸ್) ರೂ.182.71 ಲಕ್ಷಗಳು [ಉಲ್ಲೇಖ ಅನುಸೂಚಿ-20ರ ಕಂಡಿಕೆ 22].

ಇ) ನಿಗದಿತ ವೇಳೆಯಲ್ಲಿ ಜಬಲ್‌ಪುರ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣದಿಂದಾಗಿ ಸಂದಾಯ ಮಾಡಿದ ರೂ.201.21 ಲಕ್ಷದಲ್ಲಿ ಇಎಂಡಿ, ಕಾರ್ಯಾಧಾರಿತ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಹೆಚ್ಚುವರಿ ಭದ್ರತಾ ಠೇವಣಿಗಳನ್ನು, ವಹಿಸಿಕೊಡುವ ಪ್ರಾಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿವೆ. (ಉಲ್ಲೇಖ ಅನುಸೂಚಿ-20ರ ಕಂಡಿಕೆ 23)

ಆದುದರಿಂದ, ಪ್ರಸ್ತುತ ವರ್ಷದಲ್ಲಿನ ಅಧಿಕ ಲಾಭವನ್ನು ದಾಯಿತ್ವದ ವ್ಯಾಪ್ತಿಗೆ ಅನುಗುಣವಾಗಿ ವಿಚಾರಿಸಿ ಖಚಿತ ಪಡಿಸಿಕೊಂಡಿಲ್ಲ ಹಾಗೂ ಕಲ್ಪಿಸಿರುವುದಿಲ್ಲ.

9. 31-03-2009ರಂದು ಇರುವಂತೆ ಕಾಮಗಾರಿ ಬಾಕಿ ಹೊಂದಾಣಿಕೆಯ ಮೌಲ್ಯವು ರೂ.574.00 ಕೋಟಿ ರೂಪಾಯಿಗಳು ಮತ್ತು ಈ ಮೊತ್ತವನ್ನು ಚಾಲ್ತಿ ಆಸ್ತಿಯಲ್ಲಿ ಸೇರಿಸಲಾಗಿದೆ. ಕಾಮಗಾರಿ ವಹಿಸುವ ಏಜೆನ್ಸಿಗಳಿಂದ 31-03-2009ರಂದು ಬಾಕಿ ಇರುವ ಮೊತ್ತ ರೂ.744.67 ಕೋಟಿ ರೂಪಾಯಿಗಳು ಹಾಗೂ ಈ ಮೊತ್ತವನ್ನು ಚಾಲ್ತಿ ಹೊಣೆಗಳಲ್ಲಿ ಸೇರಿಸಲಾಗಿದೆ. ಕಾಮಗಾರಿ ವಹಿಸುವ ಏಜೆನ್ಸಿಗಳಿಂದ ಸ್ವೀಕರಿಸಿದ ಮೊಬಲಗಿನ ಸಂಬಂಧದಲ್ಲಿ ಹಲವಾರು ಅನುಸೂಚಿಗಳು ಲಭ್ಯವಿಲ್ಲ. ಬಾಬುವಾರು ಅನುಸೂಚಿಗಳು ಲಭ್ಯವಿಲ್ಲ. ಬಾಬುವಾರು ಅನುಸೂಚಿಗಳು ಇಲ್ಲದಿರುವುದರಿಂದ ಜಮಾ ಖರ್ಚು ಪಟ್ಟಿಯಲ್ಲಿ ತೋರಿಸಿದ ಶಿಲ್ಕನ್ನು ಸತ್ಯಾಪನೆ ಮಾಡಲಾಗುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಕಾಮಗಾರಿಯು ಪೂರ್ಣಗೊಂಡಿದ್ದರೂ, ಕಾಲಕಾಲಕ್ಕೆ ಕೆಲಸವನ್ನು ನಿರ್ವಹಣಾ ಏಜೆನ್ಸಿಗೆ ವಹಿಸಿಕೊಟ್ಟಿದ್ದರೂ, ಲೆಕ್ಕಪುಸ್ತಕಗಳಲ್ಲಿ ತತ್ಪರಿಣಾಮದ ಹೊಂದಾಣಿಕೆಗಳನ್ನು ಮಾಡಿಲ್ಲ. ಲೆಕ್ಕಗಳನ್ನು ಹೊಂದಾಣಿಕೆ ಮಾಡಿಕೊಳ್ಳದಿರುವುದರಿಂದ ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಹೊಣೆಗಳು ಹೆಚ್ಚಾಗಿವೆ. ಲಾಭ-ನಷ್ಟದ ಲೆಕ್ಕದ ಮೇಲೆ ಈ ಹೆಚ್ಚಳ ಅಥವಾ ಅದರ ಪರಿಣಾಮ ಯಾವುದೇ ಇದ್ದರೆ, ಅಂತಹ ಮೊಬಲಗನ್ನು ಖಚಿತಪಡಿಸಲಾಗುವುದಿಲ್ಲ.

**ಅಶೋಕ ಕುಮಾರ್, ಪ್ರಭಾಕರ ಮತ್ತು ಕಂಪನಿ,**
**ಚಾರ್ಟರ್ಡ್ ಅಕೌಂಟೆಂಡ್‌ರು**
**ಸಹಿ/-**
**(ಕೆ.ಎನ್. ಪ್ರಭಾಶಂಕರ್)**
**ಪಾಲುದಾರರು,**
**ಸದಸ್ಯತ್ವ ಸಂಖ್ಯೆ 19575.**

ಸ್ಥಳ : ಬೆಂಗಳೂರು
ದಿನಾಂಕ : 06-11-2009.

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## (ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)
## ಚಿನ್ನಸ್ವಾಮಿ ಕ್ರೀಡಾಂಗಣ, ರಾಜ ಭವನ ರಸ್ತೆ, ಬೆಂಗಳೂರು 560 001
## 31ನೇ ಮಾರ್ಚ್ 2009ರ ಆಯ-ವ್ಯಯ ಪಟ್ಟಿ

| ವಿವರಗಳು | ಅನುಸೂಚಿ ಸಂಖ್ಯೆ | *31.03.2009* ರಲ್ಲಿದ್ದಂತೆ | *31.03.2008* ರಲ್ಲಿದ್ದಂತೆ |
|---|---|---|---|
| | | ರೂ. | ರೂ. |
| **ನಿಧಿಗಳ ಮೂಲಗಳು** | | | |
| **ಷೇರುದಾರರ ನಿಧಿಗಳು** | | | |
| ಷೇರು ಬಂಡವಾಳ | 1 | 122,500,000 | 122,500,000 |
| ಮೀಸಲುಗಳು ಮತ್ತು ಉಳಿತಾಯ | 2 | 329,997,936 | 227,524 |
| **ಸಾಲ ನಿಧಿ** | | | |
| ಭದ್ರತೆ ಪಡೆದ ಸಾಲಗಳು | 3 | – | 44,599,591 |
| ಸಾವಧಿ ಸಾಲಗಳು | 4 | 846,745,811 | 971,334,743 |
| ಮುಂದೂಡಿದ ತೆರಿಗೆ ಹೊಣೆಗಾರಿಕೆ (ನಿವ್ವಳ) | 5 | 3,285,094 | 3,247,594 |
| **ಒಟ್ಟು** | | **1,302,528,841** | **1,141,909,452** |
| **ನಿಧಿಗಳ ವಿನಿಯೋಗ** | | | |
| **ಸ್ಥಿರಾಸ್ತಿಗಳು** | | | |
| ಒಟ್ಟು ಸ್ಥಿರಾಸ್ತಿಗಳು | 6 | 365,952,668 | 115,682,176 |
| ಕಳೆ ಸವಕಳಿ | | 81,456,057 | 78,316,228 |
| ನಿವ್ವಳ ಸ್ಥಿರಾಸ್ತಿಗಳು | | **284,496,611** | **37,365,948** |
| ಪ್ರಗತಿಯಲ್ಲಿನ ಕಾಮಗಾರಿಗಳ ಮೊತ್ತ | | 3,152,021 | 3,152,021 |
| **ಒಟ್ಟು** | | **287,648,632** | **40,517,969** |
| **ಚಾಲ್ತಿ ಸ್ವತ್ತುಗಳು, ಸಾಲಗಳು ಮತ್ತು ಮುಂಗಡಗಳು** | | | |
| **ಅ. ಪ್ರಸ್ತುತ ಸ್ಥಿರಾಸ್ತಿಗಳು** | | | |
| ಸರಕುಗಳು | 7 | 129,905,293 | 124,819,316 |
| ಸಣ್ಣಪುಟ್ಟ ಸಾಲಗಾರರು | 8 | 354,321,122 | 378,238,983 |
| ನಗದು ಮತ್ತು ಬ್ಯಾಂಕ್ ಶಿಲ್ಕುಗಳು | 9 | 1,881,549,561 | 1,819,685,703 |
| **ಒಟ್ಟು (ಅ)** | | **2,365,775,976** | **2,322,744,002** |
| **ಆ. ಸಾಲಗಳು ಮತ್ತು ಮುಂಗಡಗಳು** | | | |
| ಸಾಲಗಳು ಮತ್ತು ಮುಂಗಡಗಳು | 10 | 1,497,919,815 | 2,099,758,238 |
| ಬಾಕಿ ಉಳಿದ ಕಾಮಗಾರಿಗಳ ಹೊಂದಾಣಿಕೆ | 11 | 5,740,039,437 | 5,972,331,257 |
| **ಮೊತ್ತ** ಒಟು | (ಆ) | **7,237,959,252** | **8,072,089,495** |
| **ಪ್ರಸಕ್ತ ಒಟ್ಟು ಸ್ಥಿರಾಸ್ತಿಗಳು** | (ಅ +ಆ) | **9,603,735,228** | **10,394,833,497** |

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## (ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)
## ಚಿನ್ನಸ್ವಾಮಿ ಕ್ರೀಡಾಂಗಣ, ರಾಜ ಭವನ ರಸ್ತೆ, ಬೆಂಗಳೂರು 560 001
## 31ನೇ ಮಾರ್ಚ್ 2009ರ ಆಯ-ವ್ಯಯ ಪಟ್ಟಿ

| ವಿವರಗಳು | ಅನುಸೂಚಿ ಸಂಖ್ಯೆ | 31.03.2009 ರಲ್ಲಿದ್ದಂತೆ | 31.03.2008 ರಲ್ಲಿದ್ದಂತೆ |
|---|---|---|---|
| | | ರೂ. | ರೂ. |
| **ಚಾಲ್ತಿ ಹೊಣೆಗಾರಿಕೆಗಳು ಮತ್ತು ಹಣಕಾಸು ವ್ಯವಸ್ಥೆಗಳು** | | | |
| ಚಾಲ್ತಿ ಹೊಣೆಗಾರಿಕೆಗಳು | 12 | 693,029,480 | 640,671,222 |
| ಇಲಾಖೆಗಳಿಂದ ಮುಂಗಡ ಪಡೆದ ಹಣ | 13 | 7,446,738,180 | 8,087,426,770 |
| ಒದಗಣೆಗಳು | 14 | 449,087,359 | 696,690,261 |
| **ಒಟ್ಟು ಚಾಲ್ತಿ ಹೊಣೆಗಾರಿಕೆಗಳು** | | **8,588,855,019** | **9,424,788,253** |
| ನಿವ್ವಳ ಚಾಲ್ತಿ ಹೊಣೆಗಾರಿಕೆಗಳು | | **1,014,880,209** | **970,045,244** |
| ಲಾಭ ಮತ್ತು ನಷ್ಟದ ಲೆಕ್ಕ | | – | **(131,346,239)** |
| ಒಟ್ಟು | | **1,302,528,841** | **1,141,909,452** |

**ಟಿಪ್ಪಣಿ** **20**

**ಅನುಸೂಚಿ 1 ರಿಂದ 20 ಲೆಕ್ಕಪತ್ರದ ಸಮಗ್ರ ಭಾಗವಾಗಿರುತ್ತದೆ.**

ಸಹಿ/–
(ಅಶೋಕ್‌ಕುಮಾರ್ ಸಿಂಗ್)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಆರ್.ಪಿ.ಕುಲಕರ್ಣಿ)
ನಿರ್ದೇಶಕರು.

ಇದೇ ದಿನಾಂಕದ ನಮ್ಮ ವರದಿಯೊಂದಿಗೆ ಓದಿಕೊಳ್ಳುವುದು
ಅಶೋಕ್ ಕುಮಾರ್, ಪ್ರಭಾಶಂಕರ್ ಮತ್ತು ಕಂ ಚಾರ್ಟೆಡ್
ಅಕೌಂಟೆಂಟ್ಸ್ ಇವರ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ:06-11-2009

ಸಹಿ/–
(ಕೆ.ಎಸ್.ಪ್ರಭಾಶಂಕರ್)
ಪಾಲುದಾರರು
ಸದಸ್ಯತ್ವ ಸಂಖ್ಯೆ:19575

